ಪ್ರಾಮಾಣಿಕತೆ

# ಪ್ರಾಮಾಣಿಕತೆ



ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಜೂನ್ 2017

ಪುನರ್ ಪರಿಶೀಲಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬೈಫ್ಯೆಯ್ಥ್ ಡಿಸೈನ್ಸ್

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - Integrity)

# ಪ್ರಾಮಾಣಿಕತೆ

ಪ್ರಾಮಾಣಿಕತೆ

# ಪರಿವಿಡಿ


| | | |
|---|---|---|
| | ಪೀಠಿಕೆ | 1 |
| 1. | ಪ್ರಾಮಾಣಿಕತೆಯ ಬಗ್ಗೆ ಬೋಧನೆಗಳು | 4 |
| 2. | ದೇವರು ಪರೀಕ್ಷಿಸುತ್ತಾನೆ ಮತ್ತು ನಮ್ಮ ಪ್ರಾಮಾಣಿಕತೆಯನ್ನು ಅರಿತಿದ್ದಾನೆ (ಅಥವಾ ಅದರ ಕೊರತೆಯನ್ನು) | 9 |
| 3. | ನಮ್ಮ ಪ್ರಾಮಾಣಿಕತನದ ವಿಷಯದಲ್ಲಿ ನಾವು ಇನ್ನೂ ಏಕೆ ರಾಜಿ ಮಾಡಿಕೊಳ್ಳುತ್ತೇವೆ? | 12 |
| 4. | ಅಪ್ರಾಮಾಣಿಕತನದ ಪರಿಣಾಮಗಳು | 16 |
| 5. | ಪ್ರಾಮಾಣಿಕತೆಯ ಆಶೀರ್ವಾದಗಳು | 20 |
| 6. | ಪ್ರತ್ಯುತ್ತರ - ಬಿಡುಗಡೆ, ಪಶ್ಚಾತ್ತಾಪ, ಪರಿತ್ಯಾಗ ಮತ್ತು ಪ್ರತಿಷ್ಠೆ | 23 |
| | ಸಮರ್ಪಣೆಯ ಪ್ರಾರ್ಥನೆ | 26 |

# ಪೀಠಿಕೆ

ಈ ಪ್ರಪಂಚದಲ್ಲಿರುವ ಭ್ರಷ್ಟಾಚಾರದ ಬಗ್ಗೆ ನಮ್ಮೆಲ್ಲರಿಗೂ ಹೇಳುವುದಕ್ಕೆ ಅನೇಕ ಕಥೆಗಳಿವೆ. ಅದರಲ್ಲೂ ಮುಖ್ಯವಾಗಿ ನಾವು ಸರ್ಕಾರಿ ಕಛೇರಿ ಮತ್ತು ಬೇರೆ ಸ್ಥಳಗಳಿಗೆ ಭೇಟಿ ಕೊಟ್ಟಾಗ ನಾವು ಭ್ರಷ್ಟಾಚಾರ, ಅಪ್ರಾಮಾಣಿಕತೆ ಮತ್ತು ಲಂಚಕೋರತನವನ್ನು ಎಲ್ಲಾ ಕಡೆಗಳಲ್ಲಿಯೂ ಸಂಧಿಸುತ್ತೇವೆ. ಇದು ಮಾದರಿಯಾಗಿರುವಂತೆ ಕಾಣುತ್ತದೆ. ಎಲ್ಲಿಯವರೆಗೆ ಅಗತ್ಯ, ಮೋಸ ಮತ್ತು ಸುಳ್ಳು ಹೇಳುವುದಕ್ಕೆ ಕಾರಣಗಳಿರುತ್ತದೆಯೋ ಅಲ್ಲಿಯವರೆಗೆ ಇದು ಸ್ವೀಕಾರಾರ್ಹ ಎಂದು ಅನಿಸುತ್ತದೆ.

ಹೇಗಾದರೂ ಸರಿ, ದೇವರ ಮಕ್ಕಳಾದ ನಮ್ಮಲ್ಲಿ ಅಸತ್ಯ, ಅನೀತಿ ಮತ್ತು ಪ್ರಾಮಾಣಿಕತೆಯ ಕೊರತೆಯನ್ನು ನಾವು ನೋಡುವಾಗ ನಿಜವಾಗಿ ದುಃಖವಾಗುತ್ತದೆ. ಯಾಕೆಂದರೆ ಕನಿಷ್ಟ ಪಕ್ಷ ಇದು ದೇವರ ಮಕ್ಕಳಾದ ನಮಗೆ ಚೆನ್ನಾಗಿ ತಿಳಿದಿರಬೇಕು. ಯಾಕೆಂದರೆ ಇದೆಲ್ಲದರ ಬಗ್ಗೆ ಹೇಳಿಕೊಡುವ ದೇವರ ವಾಕ್ಯದಲ್ಲಿ ನಾವು ಇದನ್ನು ಓದುತ್ತೇವೆ. ದೇವರ ವಾಕ್ಯವನ್ನು ಬೋಧಿಸುವ ಸಭಾಪಾಲಕರು, ಉಪದೇಶಕರು, ಸುವಾರ್ತಿಕರು, ಸೇವಕರಲ್ಲಿ, ನಾವು ಅನೀತಿ, ಅಸತ್ಯ ಮತ್ತು ಅಪ್ರಾಮಾಣಿಕತನವನ್ನು ನೋಡುವಾಗ ಅದು ಇನ್ನೂ ಹೆಚ್ಚು ಕೆಟ್ಟದೆನಿಸುತ್ತದೆ. ಖಂಡಿತವಾಗಿ ನಮ್ಮಲ್ಲಿ ಅನೇಕರು ‘‘ಕ್ರಿಸ್ತೀಯ’’ ಲಂಚ, ಸುಳ್ಳು, ಅಪ್ರಾಮಾಣಿಕತನ ಮತ್ತು ಏನೆಲ್ಲಾದರ ಬಗ್ಗೆ ಕಥೆಗಳನ್ನು ಹಂಚಿಕೊಳ್ಳಲು ಸಾಧ್ಯ.

ನಾವು ಬೆಂಗಳೂರಿನಲ್ಲಿ ‘‘ಆಲ್ ಪೀಪಲ್ಸ್ ಸಭೆ’’ಯನ್ನು ಸ್ಥಾಪಿಸಿ ಪ್ರಾರಂಭಿಸಿದಾಗ, ಎಲ್ಲಾ ಕ್ರಿಸ್ತೀಯರೂ ಸತ್ಯವನ್ನೇ ಮಾತನಾಡುತ್ತಾರೆಂಬ ಅಭಿಪ್ರಾಯ ನಮ್ಮಲ್ಲಿತ್ತು. ನಾವು ಬಹುಶಃ ಈ ರೀತಿ ಅಂದುಕೊಂಡೆವು ಏಕೆಂದರೆ, ಈ ಹಿಂದೆ ನಾವು ಕಾರ್ಯ ಮಾಡಿದ ಮತ್ತು ಪರಸ್ಪರ ಕಾರ್ಯ ಮಾಡಿದ ಸಣ್ಣ ಸಮಾಜದಲ್ಲಿ ಜನರು ಸತ್ಯವನ್ನು ಮಾತಾಡಿದರು ಮತ್ತು ನಾವು ಸ್ವಲ್ಪವೂ ಸಂಶಯಪಡದೆ ಆ ಜನರನ್ನು ನಂಬಿದೆವು. ಆದ್ದರಿಂದ ನಾವು ಈ ಅಭಿಪ್ರಾಯವನ್ನು ನಮ್ಮಲ್ಲಿ ಬೆಳೆಸಿಕೊಂಡೆವು. ಹೇಗಾದರೂ ಸರಿ, ಸುಳ್ಳು ಹೇಳುವ ಕ್ರಿಸ್ತೀಯರನ್ನು ನಾವು ಸಂಧಿಸಿದಾಗ ಬೆಚ್ಚಿ ಬಿದ್ದೆವು! ನಮ್ಮ ತಕ್ಷಣದ ಪ್ರತಿಕ್ರಿಯೆ ಅಪನಂಬಿಕೆಯಾಗಿತ್ತು. ‘‘ಕ್ರಿಸ್ತೀಯರು ಸುಳ್ಳು ಹೇಳಲೇಬಾರದು, ಅನೀತಿವಂತರಾಗಿ ನಡೆಯಬಾರದು ಮತ್ತು ಅವರೇ ಪ್ರಾಮಾಣಿಕತೆಯ ಕೊರತೆಯುಳ್ಳವರಾಗಿ ವರ್ತಿಸಬಾರದು.’’

ಪ್ರಾಮಾಣಿಕತನ ಇಲ್ಲದೆ ಇರುವ ದೇವರ ಸೇವಕರು ಮತ್ತು ಬೋಧಕರನ್ನು ನಾವು ಸಂಧಿಸಿದ್ದೇವೆ. ಅವರ 'ಒಳ್ಳೆಯ' ಕೆಲಸದ ಬಗ್ಗೆ ವರದಿಗಳನ್ನು ಕೇಳುತ್ತಾ ಮತ್ತು ಭಾವಚಿತ್ರಗಳನ್ನು ನೋಡುತ್ತಾ ಅಂತಹ ಅನೇಕ ಘಟನೆಗಳನ್ನು ನಾನು ವಿವರಿಸಬಹುದು. ಅವರ ಮಾತನ್ನು ನಂಬಿ ಅನೇಕ ಸಾವಿರ ರೂ.ಗಳ ಚೆಕ್‌ಗಳನ್ನು ಹಲವು ಸಂದರ್ಭಗಳಲ್ಲಿ ನಾನು ಬರೆದುಕೊಟ್ಟಿದ್ದೇನೆ. ನಾವು ಜನರ ಮಾತನ್ನು ಅವರ ಮುಖಭಾವದ ಬೆಲೆಯನ್ನು ನೋಡಿ ತೆಗೆದುಕೊಳ್ಳಲಾಗುವುದಿಲ್ಲವೆಂದು ಕೊನೆಗೆ ಜ್ಞಾನೋದಯವಾಯಿತು. ಆಗ ಜನರನ್ನು ನಿಜವಾಗಿ ಮನದಟ್ಟು ಮಾಡಿಕೊಂಡ ಹೊರತು ಅವರನ್ನು ನಂಬಬಾರದು ಎಂಬ ಒಂದು ಹಂತಕ್ಕೆ ನಾವು ತಲುಪಿದೆವು. ನಾವು ನಮ್ಮ ಅನಿಸಿಕೆಗಳನ್ನು ಮತ್ತೊಮ್ಮೆ ಹೊಂದಿಸಿಕೊಳ್ಳಬೇಕಾಯಿತು. ನಾವು ಜನರನ್ನು ಸಂಪೂರ್ಣವಾಗಿ ನಂಬುವುದಕ್ಕೆ ಮುಂಚೆ ಬೆಲೆ ಕಟ್ಟುವ ಅಗತ್ಯವಿದೆ ಎನ್ನುವ ಹಂತಕ್ಕೆ ನಾವು ಬಂದೆವು.

ದೇವರ ಮಕ್ಕಳಾದ ನಮ್ಮೊಳಗೆ ಹುರಿದುಂಬಿಸುವುದೇ ಈ ಬರೆಯೋಣದ ವಾಸ್ತವವಾಗಿದೆ:

- ಪ್ರಾಮಾಣಿಕತೆಗೆ ವಚನಬದ್ಧರಾಗಿರುವುದು.
- ಸತ್ಯ ಸಂಧತೆಗೆ ವಚನಬದ್ಧರಾಗಿರುವುದು.
- ನಾವು ನಮ್ಮ ಮಾತಿನಲ್ಲಿ, ವ್ಯಾಪಾರ ನಡೆಸುವುದರಲ್ಲಿ, ವೃತ್ತಿ ಜೀವನದಲ್ಲಿ ಮತ್ತು ನಾವು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಸತ್ಯತೆಗೆ ಮತ್ತು ನೀತಿಗೆ ವಚನ ಬದ್ಧರಾಗಿರಬೇಕು. ನಮಗೆ ಅದು ಎಷ್ಟೇ ದುಬಾರಿಯಾದರೂ ನಾವು ನೀತಿಗೆ ವಚನಬದ್ಧರಾಗಿರುವುದು ನಮ್ಮ ಮನೋವೃತ್ತಿಯಾಗಿರಬೇಕು.
- ಪ್ರಾಮಾಣಿಕತೆಯಲ್ಲಿ ನಡೆಯುವಾಗ ಬರುವ ಆಶೀರ್ವಾದದ ವಿಷಯದಲ್ಲಿ ಆಸಕ್ತಿಗೊಳಿಸುವುದು. ನಾವು ಇಚ್ಛಾರ್ಥಕ ಅನುಕೂಲಗಳಿಗಾಗಿ ಸುಳ್ಳು ಹೇಳುವಾಗ ದೇವರು ನಮಗೆ ಇಟ್ಟಿರುವ ಆಶೀರ್ವಾದಗಳನ್ನು ಕಳೆದುಕೊಳ್ಳುತ್ತೇವೆಂದು ನಾವು ಗ್ರಹಿಸುವದಿಲ್ಲ.
- ದೇವರಿಗೆ ನಮ್ಮನ್ನು ಸಮರ್ಪಿಸಿ, ನಮ್ಮನ್ನು ಎತ್ತಿ ಹಿಡಿದಿರುವ ಬಂಧನಗಳನ್ನು ಒಡೆಯುವುದಕ್ಕಾಗಿ ಆತನಿಗೆ ಬಿಟ್ಟುಕೊಡುವಾಗ, ನಾವು ಈ ಕ್ಷೇತ್ರಗಳಲ್ಲಿ ಬದಲಾಗಬಹುದು. ನಮ್ಮಲ್ಲಿ ಕೆಲವರಿಗೆ ನಾವೇ ಕಟ್ಟಲ್ಪಟ್ಟಿದ್ದೇವೆಂದು ಮತ್ತು ನಮಗೆ ಸತ್ಯವನ್ನು ನಿಜವಾಗಿ ಮಾತನಾಡಬೇಕೆನಿಸಿದರೂ ಮಾತನಾಡುವುದಕ್ಕೆ

ಆಗದಿರುವುದನ್ನು ನಮ್ಮಲ್ಲಿ ಕಾಣಬಹುದು. ಪರಿಸ್ಥಿತಿ ಹಾಗಿದ್ದರೆ ಸತ್ಯವೇದ ಮಾತನಾಡುವ ಸುಳ್ಳು ಮತ್ತು ವಂಚನೆಯ ಆತ್ಮಗಳಿಂದ ನಾವು ಸ್ವತಂತ್ರರಾಗುವುದು ಅವಶ್ಯ.

**ನಮ್ಮಲ್ಲಿ ಪ್ರತಿಯೊಬ್ಬರು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಪ್ರಾಮಾಣಿಕತೆ, ಸತ್ಯತೆ ಮತ್ತು ನೀತಿಗೆ ಸಂಪೂರ್ಣವಾಗಿ ಸಮರ್ಪಿಸುವ ಹಂತಕ್ಕೆ ಬರಬೇಕು.**

# 1

# ಪ್ರಾಮಾಣಿಕತೆಯ ಬಗ್ಗೆ ಬೋಧನೆಗಳು

ಸತ್ಯವೇದವು ನಮಗೆ ಪ್ರಾಮಾಣಿಕತೆ, ನೀತಿ ಮತ್ತು ಸತ್ಯದಲ್ಲಿ ನಡೆಯುವುದನ್ನು ಕಲಿಸುತ್ತದೆ.

**ಯೆಹೋವನು ಹಗೆ ಮಾಡುವ ವಸ್ತುಗಳು ಆರು ಇವೆ. ಹೌದು ಏಳು ಆತನಿಗೆ ಅಸಹ್ಯವಾಗಿ ತೋರುತ್ತವೆ. ಯಾವುವೆಂದರೆ ಹೆಮ್ಮೆಯ ಕಣ್ಣು, ಸುಳ್ಳಿನ ನಾಲಿಗೆ, ನಿರ್ದೋಷ ರಕ್ತವನ್ನು ಸುರಿಸುವ ಕೈ, ದುರಾಲೋಚನೆಯನ್ನು ಕಲ್ಪಿಸುವ ಹೃದಯ, ಕೇಡು ಮಾಡಲು ತ್ವರೆ ಪಡುವ ಕಾಲು, ಅಸತ್ಯವಾಡುವ ಸುಳ್ಳು ಸಾಕ್ಷಿ, ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವನು ಈ ಏಳೇ** (ಜ್ಞಾನೋಕ್ತಿಗಳು 6:16-19).

ಜ್ಞಾನೋಕ್ತಿಗಳು 6:16-19ರವರೆಗಿನ ವಚನಗಳು ದೇವರು ಅಸಹ್ಯಪಡುವ ಸಂಗತಿಗಳನ್ನು ಪಟ್ಟಿ ಮಾಡುತ್ತದೆ. ಇವುಗಳಲ್ಲಿ ಸುಳ್ಳು, ವಂಚನೆ, ದುಷ್ಟತ್ವವನ್ನು ನಡೆಸುವುದು, ಸುಳ್ಳು ಸಾಕ್ಷಿ ಮತ್ತು ಜಗಳಗಳನ್ನು ಬಿತ್ತುವುದು ಒಳಗೊಂಡಿದೆ. ಉದಾಹರಣೆಗೆ ಒಂದು ಕಂಪನಿಯ ಲೆಕ್ಕಿಗ ನಿಜಾಂಶವನ್ನು ತೋರಿಸದಿರುವ ವರದಿಯನ್ನು ತಯಾರಿಸಲು ಸಂಖ್ಯೆಯಲ್ಲಿ ಕೈ ಚಳಕ ತೋರಿದರೆ, ಅದು ಕೆಟ್ಟದ್ದನ್ನು ಕಲ್ಪಿಸುವ ಸಾರವಾಗಿದೆ. ನಾವು ಏನಾದರೊಂದನ್ನು ನೋಡದೆ ಇದ್ದಾಗ್ಯೂ ನೋಡಿದ್ದೇವೆಂದು ನಾವು ಹೇಳುವಾಗ, ದೇವರ ದೃಷ್ಟಿಯಲ್ಲಿ ಅಸಹ್ಯವಾಗಿರುವ ಸುಳ್ಳು ಸಾಕ್ಷಿಯನ್ನು ಕೊಡುವಂತವರಾಗಿರುತ್ತೇವೆ.

**ಸುಳ್ಳು ತುಟಿ ಯೆಹೋವನಿಗೆ ಹೇಸು; ಸತ್ಯವಂತರು ಆತನಿಗೆ ಲೇಸು** (ಜ್ಞಾನೋಕ್ತಿಗಳು 12:22).

ದೇವರು ಸುಳ್ಳು ತುಟಿಗಳನ್ನು ಕೇವಲ ಸ್ವಭಾವದ ನ್ಯೂನತೆ ಎಂದು ಉದಾಸೀನ ಮಾಡುವುದಿಲ್ಲ ಮತ್ತು ಕ್ಷಮಿಸುವುದಿಲ್ಲ. ''ದೇವರಿಗೆ ಅಸಹ್ಯ'' ಎನ್ನುವ ವಿಷಯ ಆತನು ಅದನ್ನು ಸಹಿಸುವುದೇ ಇಲ್ಲ ಎನ್ನುವುದನ್ನು ತಿಳಿಸುತ್ತದೆ. ಬದಲಾಗಿ ದೇವರು ಯಾರೂ ಪ್ರಾಮಾಣಿಕವಾಗಿ ವ್ಯವಹರಿಸುತ್ತಾರೋ, ಅವರಲ್ಲಿ ಸಂತೋಷಿಸುತ್ತಾರೆ. ನಾವು ನಮ್ಮ ಕೆಲಸದಲ್ಲಿ ಹಣಕಾಸಿನಲ್ಲಿ ಮತ್ತು ನಮ್ಮ ಜೀವಿತದ ಪ್ರತಿಯೊಂದು ಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿರುವುದಕ್ಕೆ ಸಮರ್ಪಿಸಿದಾಗ ''ನಾವು ಆತನ ಸಂತೋಷ'' ಎಂದು

ಸತ್ಯವೇದ ಹೇಳುತ್ತದೆ. ನಾವು ಪ್ರಾಮಾಣಿಕವಾಗಿ ವ್ಯವಹರಿಸಿದಾಗ ದೇವರು ಸಂತೋಷ ಪಡುತ್ತಾರೆ. ನಮ್ಮ ಮೇಲಧಿಕಾರಿ ಸತ್ಯವಲ್ಲದ ಏನಾದರೊಂದನ್ನು ಮಾಡು ಎನ್ನುವಾಗ, ದೇವರನ್ನು ಮೆಚ್ಚಿಸುವುದಕ್ಕೆ ಅಥವಾ ನಮ್ಮ ಮೇಲಧಿಕಾರಿಯನ್ನು ಮೆಚ್ಚಿಸಲು ತೆಗೆದುಕೊಳ್ಳುವ ನಿರ್ಧಾರ ನಮಗೆ ಬಿಟ್ಟದ್ದು. ಆಯ್ಕೆ ಸಂಪೂರ್ಣವಾಗಿ ನಮ್ಮದು. ಪ್ರಾಮಾಣಿಕತೆಗೆ ನಾವು ಸಂಪೂರ್ಣವಾಗಿ ಸಮರ್ಪಿಸುವುದು ಅಗತ್ಯ.

**ನಿಮ್ಮಲ್ಲಿರುವ ಬಡವರು ವ್ಯಾಜ್ಯವಾಡಿದಾಗ ನೀವು ನ್ಯಾಯವನ್ನು ಬಿಟ್ಟು ತೀರ್ಮಾನ ಮಾಡಬಾರದು. ಮೋಸದ ಕಾರ್ಯಕ್ಕೆ ದೂರವಾಗಿರಬೇಕು. ನಿರಪರಾಧಿಯೂ, ಸನ್ಮಾರ್ಗಸ್ಥನಾಗಿಯೂ ಇರುವ ಮನುಷ್ಯನಿಗೆ ಮರಣದಂಡನೆಯನ್ನು ವಿಧಿಸಲೇ ಬಾರದು. ಅಂಥ ದುಷ್ಟತ್ವವನ್ನು ಮಾಡಿದವನಿಗೆ ನಾನು ಶಿಕ್ಷೆಯನ್ನು ವಿಧಿಸದೆ ಬಿಡುವುದಿಲ್ಲ. ಲಂಚವನ್ನು ತೆಗೆದುಕೊಳ್ಳಲೇಬಾರದು. ಲಂಚವು ಕಣ್ಣುಳ್ಳವರನ್ನು ಕುರುಡರಂತೆ ಮಾಡುತ್ತದೆ. ನಿರಪರಾಧಿಯಾದವನ ನ್ಯಾಯವನ್ನು ಕೆಡಿಸುತ್ತದೆ.** (ವಿಮೋಚನಕಾಂಡ 23:6-8).

ಕೆಲವು ಬಾರಿ ನಾವು ಸುಳ್ಳು ಆಶ್ರಯಿಸಿರುವ ಸತ್ಯವನ್ನು ರಕ್ಷಿಸಬೇಕೆಂಬುದಾಗಿ ಆಲೋಚಿಸುವುದು ಹಾಸ್ಯಕರವಾಗಿದೆ. ಅದು ನಿಜವಾಗಿಯೂ ಅನಾವಶ್ಯಕ ಏಕೆಂದರೆ ಸತ್ಯ ತಾನೇ ತಾನಾಗಿ ನಿಲ್ಲುತ್ತದೆ ಮತ್ತು ನಮ್ಮ ಸುಳ್ಳುನಿಂದ ಅದನ್ನು ಕಾಪಾಡುವ ಅಗತ್ಯವಿಲ್ಲ. ಕೆಲಸ ಮಾಡುವ ಸ್ಥಳದಲ್ಲಿ ಆಗಾಗ ನಡೆಯುವ ಈ ಸ್ಥಿತಿಯನ್ನು ಆಲೋಚಿಸಿ ನಿಮ್ಮ ಸಹೋದ್ಯೋಗಿ ನಿಜವಾಗಿಯೂ ಆರೋಗ್ಯವಾಗಿದ್ದರೂ ಬೇರೆ ಕೆಲಸ ಮಾಡುವುದಕ್ಕಾಗಿ ಒಂದು ದಿನ ರಜಾ ಹಾಕುವುದಕ್ಕೆ ಆಲೋಚಿಸಿ ನಿಮಗೆ ದೂರವಾಣಿ ಕರೆ ಮಾಡಿ ತಾನು ಅಸ್ವಸ್ಥನಾಗಿದ್ದೇನೆಂದು ಮೇಲಧಿಕಾರಿಗೆ ತಿಳಿಸುವಂತೆ ನಿಮ್ಮನ್ನು ಬೇಡಿಕೊಳ್ಳುತ್ತಾನೆ. ಹಾಗೆ ಮಾಡುವುದಕ್ಕೆ ನೀವು ಒಪ್ಪಿಕೊಂಡು ನಿಮ್ಮ ಮೇಲಧಿಕಾರಿಗಳಿಗೆ ಸುಳ್ಳನ್ನು ಹೇಳುತ್ತೀರಿ. ನಿನ್ನ ಸ್ನೇಹಿತನಿಗೆ ಸಹಾಯ ಮಾಡುವ ಮೂಲಕ ಏನೋ ಒಳ್ಳೆಯದನ್ನು ಮಾಡುತ್ತಿದ್ದೇನೆಂದು ನೀನು ಅಂದುಕೊಳ್ಳಬಹುದು. ಆದರೆ ನಿನ್ನ ಸ್ನೇಹಿತನು ಆರೋಗ್ಯದಿಂದಿದ್ದು ಹೊರಗೆ ತನ್ನ ವೈಯುಕ್ತಿಕ ಕೆಲಸವನ್ನು ಮಾಡುತ್ತಿದ್ದಾನೆಂದು ನಿನಗೆ ಗೊತ್ತಿರುವುದರಿಂದ ನೀನು ನಿಜವಾಗಿ ಸುಳ್ಳನ್ನು ಹೇಳುತ್ತಿದ್ದಿ. ನಿಜಾಂಶ ಏನೆಂದರೆ ಅವನ ಸುಳ್ಳುಗಾರಿಕೆಯಲ್ಲಿ ನೀನೂ ಪಾಲುಗಾರನಾಗಿದ್ದಿ. ವಿಮೋಚನಾ ಕಾಂಡ 23:7 ''ಮೋಸದ ಕಾರ್ಯಗಳಿಂದ ದೂರವಿರಬೇಕೆಂದು'' ನಮಗೆ ಹೇಳುತ್ತದೆ. ಅಂತಹ ಕೆಲಸಗಳಿಗೆ ಒಳಪಡಬೇಡಿ. ಮೇಲಧಿಕಾರಿಗೆ ಸತ್ಯವನ್ನು ಹೇಳಬೇಕೆಂದು ನಿಮ್ಮ ಸಹೋದ್ಯೋಗಿಗೆ ಹೇಳಲು ಧೈರ್ಯ ತೆಗೆದುಕೊಳ್ಳಿರಿ. ನಮ್ಮ ಸ್ನೇಹಿತನಿಗೆ ನಾವು ಉಪಕಾರ ಮಾಡುತ್ತಿದ್ದೇವೆಂದು ತಿಳಿದು ಕೆಲವು ಸಲ ನಾವು ಇಂತಹ ಸಂಗತಿಗಳಿಗೆ ಒಳಪಡುತ್ತೇವೆ. ಇಲ್ಲ, ನಾವು ಹೀಗೆ ಮಾಡಬಾರದು!

**ಹಾಗಾದರೆ ಕೆಟ್ಟದ್ದಕ್ಕೆ ಹೋಗದಂತೆ ನಾಲಿಗೆಯನ್ನು ಕಾದುಕೋ, ವಂಚನೆಯ ಮಾತುಗಳಿಗೆ ಬಿಡದೆ ತುಟಿಗಳನ್ನು ಇಟ್ಟುಕೋ** (ಕೀರ್ತನೆಗಳು 34:13).

ಕೀರ್ತನೆಗಳು 34:13ರಲ್ಲಿ ನಾವು ನಮ್ಮ ನಾಲಿಗೆಯನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತದೆ. ನಮ್ಮ ನಾಲಿಗೆ ನಮ್ಮ ಹತೋಟಿಯಲ್ಲಿದೆಯೇ ಹೊರತು ಸೈತಾನನ ಹತೋಟಿಯಲ್ಲಿಲ್ಲ ಎಂದು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಕೆಲವು ಜನರು ''ಸೈತಾನನು ನಾನು ಸುಳ್ಳು ಹೇಳುವಂತೆ ಮಾಡಿದ'' ಎಂದು ತಮಗೆ ತಾವೇ ನೆಪ ಹೇಳಿಕೊಳ್ಳುತ್ತಾರೆ. ನಿಜ ಹೇಳಬೇಕೆಂದರೆ, ಅವರು ಸುಳ್ಳಾಡಿದ್ದಾರೆ. ಹತೋಟಿಯೇ ಇಲ್ಲದ ಸುಳ್ಳಾಡುವ ಹಂತಕ್ಕೆ ಸೈತಾನನು ಕೆಲವರ ಮೇಲೆ ಪ್ರಭಾವ ಬೀರಿ, ಅವರನ್ನು ಬಂಧನದಲ್ಲಿರಿಸಿರಬಹುದು, ಆದರೆ ಇಂತಹ ಬಂಧನಗಳನ್ನು ''ಯೇಸುವಿನ ನಾಮದಲ್ಲಿ'' ಮುರಿಯಬಹುದು. ಹೇಗಾದರೂ, ಅಂತಿಮವಾಗಿ ನಮ್ಮ ನಾಲಿಗೆಗಳು ನಮ್ಮ ಹತೋಟಿಯಲ್ಲಿವೆ. ನಮಗೆ ಸುಳ್ಳಾಡುವ ಅಭ್ಯಾಸವಿರುವುದರಿಂದ ಸೈತಾನನನ್ನೋ, ನಮ್ಮ ತಂದೆತಾಯಿಯರನ್ನೋ, ನಮ್ಮ ಸಂಬಂಧಿಗಳನ್ನೋ ಅಥವಾ ನಾವು ಬೆಳೆದ ವಾತಾವರಣವನ್ನೋ ನಾವು ದೂಷಿಸಬಾರದು. ನಮ್ಮ ನಾಲಿಗೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದನ್ನು ನಾವು ಕಲಿಯಬೇಕು.

ಸುಳ್ಳಾಡುವಾಗ ನಾವು ಇನ್ನೊಂದು ನೆಪವನ್ನು ಉಪಯೋಗಿಸುತ್ತೇವೆ. ಅದೇನೆಂದರೆ ''ನಾನು ಸ್ವಲ್ಪ ಸುಳ್ಳಾಡಿದ್ದರೂ, ನಾನು ನಿಜವಾಗಿಯೂ ನಿಷ್ಕಪಟಿಯಾಗಿದ್ದೇನೆಂದೂ, ನನ್ನ ಹೃದಯವನ್ನು ದೇವರು ಬಲ್ಲಾತನಾಗಿದ್ದಾನೆಂದೂ ಹೇಳುತ್ತೇವೆ. ಇದು ಜನರ ಮೇಲೆ ಎಂತಹ ಪ್ರಭಾವ ಬೀರುತ್ತದೆ ಎಂಬುದನ್ನು ನಾವು ಚಿಂತಿಸುವುದಿಲ್ಲ. ಆದರೆ ಹೊಸ ಒಡಂಬಡಿಕೆ ನಾವು ಬರೀ ದೇವರ ಮುಂದೆಯಲ್ಲದೆ, ಮನುಷ್ಯರ ಮುಂದೆಯೂ ಪ್ರಾಮಾಣಿಕವಾಗಿರಬೇಕೆಂದು ನಮಗೆ ಕಲಿಸುತ್ತದೆ. ''ದೇವರು ನನ್ನನ್ನು ನೋಡುತ್ತಾರೆ ಮತ್ತು ಆತನಿಗೆ ನನ್ನ ಹೃದಯ ಹೇಗಿದೆಯೆಂದು ಗೊತ್ತು'' ಎಂದು ನಾವು ಹೇಳುವುದು ಸರಿಯಲ್ಲ. ನಾವು ಮನುಷ್ಯರ ಮುಂದೆಯೂ ಪ್ರಾಮಾಣಿಕವಾಗಿರಬೇಕೆಂದು ಸತ್ಯವೇದ, ನಮಗೆ ಹೇಳುತ್ತದೆ. ರೋಮಾಪುರದವರಿಗೆ 12:17ರಲ್ಲಿ ''ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ, ಎಲ್ಲರ ದೃಷ್ಟಿಯಲ್ಲಿ ಯಾವುದು ಗೌರವವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ'' ಎಂದು ಹೇಳುತ್ತದೆ. ಉದಾಹರಣೆಗೆ : ಒಬ್ಬ ಮನುಷ್ಯನಿಗೆ ಒಂದು ದೊಡ್ಡದಾದ ಅವಶ್ಯಕತೆ ಇದ್ದರೆ, ಅವನು ಬೇರೆಯವರಿಂದ ಕದ್ದು ''ದೇವರಿಗೆ ನನ್ನ ಮತ್ತು ನನ್ನ ಪರಿಸ್ಥಿತಿಯ ಬಗ್ಗೆ ಗೊತ್ತು. ನಾನು ಸಾಮಾನ್ಯವಾಗಿ ಇಂಥ ಕಾರ್ಯ ಮಾಡುವುದಿಲ್ಲ. ಆದರೆ ನನಗೆ

ಬಹಳ ಅವಶ್ಯಕತೆ ಇದ್ದುದರಿಂದ ಇಂಥ ಕೆಲಸವನ್ನು ಮಾಡಿದೆ'' ಎಂಬ ನೆಪವನ್ನು ಉಪಯೋಗಿಸಬಾರದು. ಬಹಳ ಅವಶ್ಯಕತೆ ಇದೆ ಎಂದು ಕದಿಯುವುದನ್ನು ದೇವರು ಕ್ಷಮಿಸುವುದಿಲ್ಲ ಮತ್ತು ಮನುಷ್ಯನೂ ಕ್ಷಮಿಸುವುದಿಲ್ಲ!

**ಕರ್ತನ ದೃಷ್ಟಿಯಲ್ಲಿ ಮಾತ್ರವಲ್ಲದೆ ಮನುಷ್ಯರ ದೃಷ್ಟಿಯಲ್ಲಿಯೂ ಗೌರವವಾದದ್ದನ್ನು ಯೋಚನೆಗೆ ತಂದುಕೊಳ್ಳುವವರಾಗಿದ್ದೇವೆ** (2 ಕೊರಿಂಥದವರಿಗೆ 8:21).

ಪೌಲನು ಅವನಿಗೆ ಕೊಡಲ್ಪಟ್ಟ ಕಾಣಿಕೆಗಳನ್ನು ಸಂಗ್ರಹಿಸುವುದಕ್ಕೆ ಹೇಗೆ ಹೋದನು ಮತ್ತು ಸಭೆಗಳಿಂದ ಅವನಿಗೆ ಕೊಡಲ್ಪಟ್ಟ ಹಣವನ್ನು ಅವನು ಹೇಗೆ ನಿರ್ವಹಿಸಿದನು ಎಂಬುದನ್ನು ವಿವರಿಸುತ್ತಾನೆ. ಅವನು ಬಹಳ ವಿಚಾರಶೀಲತೆಯಿಂದ ತನ್ನನ್ನು ತಾನೇ ನಡೆಸಿಕೊಂಡನು. ಅವನನ್ನು ನಂಬಿ ಹಣವನ್ನು ಅವನ ಕೈಯಲ್ಲಿ ಒಪ್ಪಿಸಿದ ದೇವರ ದೃಷ್ಟಿಯಲ್ಲಿಯೂ, ಜನರ ದೃಷ್ಟಿಯಲ್ಲಿಯೂ ಅವನು ಹಣವನ್ನು ಬಹಳ ಜವಾಬ್ದಾರಿಕೆಯ ಜ್ಞಾನದಿಂದ ಉಪಯೋಗಿಸಿದನು. ಪೌಲನು ಅವನ ಎಲ್ಲಾ ವ್ಯವಹಾರಗಳು ದೇವರ ದೃಷ್ಟಿಯಲ್ಲಿ ಮಾತ್ರವಲ್ಲದೆ ಮನುಷ್ಯರ ದೃಷ್ಟಿಯಲ್ಲಿ ಪ್ರಾಮಾಣಿಕವಾಗಿರಬೇಕೆಂದು ಅಭಿಪ್ರಾಯಪಟ್ಟನು.

ಆದ್ದರಿಂದಲೇ ಆಲ್ ಪೀಪಲ್ಸ್ ಸಭೆಯಲ್ಲಿ ನಮ್ಮ ಎಲ್ಲಾ ಲೆಕ್ಕದ ಪುಸ್ತಕಗಳು ಕ್ರಮವಾಗಿ ಇರಬೇಕೆಂದು ನಾವು ಆದಷ್ಟೂ ಪ್ರಯತ್ನಿಸುತ್ತೇವೆ. ನಮ್ಮ ಹಣಕಾಸಿನ ವಹಿವಾಟಿನ ಎಲ್ಲಾ ಬಿಲ್‌ಗಳು ಮತ್ತು ವಿವರಗಳು ಸರಿಯಾದ ರೀತಿಯಲ್ಲಿ ಕಾಪಾಡಲ್ಪಟ್ಟಿರಬೇಕೆಂದು ನಾವು ಒತ್ತಿ ಹೇಳುತ್ತೇವೆ. ಏಕೆಂದರೆ ಯಾರಾದರೂ ಬಂದು ನಮ್ಮನ್ನು ಪ್ರಶ್ನಿಸಿದರೆ, ನಮ್ಮ ಹತ್ತಿರ ಎಲ್ಲಾ ವರದಿಗಳು ಸರಿಯಾದ ರೀತಿಯಲ್ಲಿ ಇರಬೇಕು. ಈ ವಿಷಯದಲ್ಲಿ ನಾವು ಅಧಿಕ ಪ್ರಯತ್ನವನ್ನು ಮಾಡುವುದರಿಂದ ದೇವರು ಮತ್ತು ಮನುಷ್ಯನಿಗೆ ಸರಿಯಾದ ರೀತಿಯಲ್ಲಿ ಲೆಕ್ಕವನ್ನು ಕೊಡುವ ಸ್ಥಾನದಲ್ಲಿ ನಾವಿರುತ್ತೇವೆ.

**ಆದಕಾರಣ ಸುಳ್ಳಾಡುವುದನ್ನು ಬಿಟ್ಟು ಬಿಟ್ಟು ಪ್ರತಿಯೊಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಆಡಲಿ; ಯಾಕೆಂದರೆ ನಾವು ಒಬ್ಬರಿಗೊಬ್ಬರು ಅಂಗಗಳಾಗಿದ್ದೇವಲ್ಲಾ** (ಎಫೆಸದವರಿಗೆ 4:25).

ನಾವು ಸಭೆಯಲ್ಲಿ ಒಬ್ಬರಿಗೊಬ್ಬರು ''ದೇವರಿಗೆ ಸ್ತೋತ್ರ'' ಎಂದು ಹೇಳಿಯೂ, ಒಬ್ಬರಿಗೊಬ್ಬರು ಸುಳ್ಳಾಡುವುದನ್ನು ಮುಂದುವರಿಸುವಾಗ, ಇದನ್ನು ನಾವು ಹೇಗೆ ಹೇಳುತ್ತೇವೆ ಎಂಬುದು ನಿಜವಾಗಿಯೂ ವಿಚಿತ್ರವಾಗಿದೆ! ನಾವು ಸುಳ್ಳನ್ನು ದೂರಮಾಡಿ,

ಒಬ್ಬರಿಗೊಬ್ಬರು ಸತ್ಯವನ್ನು ಮಾತನಾಡಬೇಕೆಂದು ಸತ್ಯವೇದ ನಮಗೆ ಹೇಳುತ್ತದೆ - ನಾವೆಲ್ಲರೂ ಕ್ರಿಸ್ತನ ಶರೀರಕ್ಕೆ ಸೇರಿದವರಾಗಿರುವುದರಿಂದ ಒಬ್ಬರಿಗೊಬ್ಬರು ಸತ್ಯವನ್ನೇ ಮಾತನಾಡಬೇಕು.

**ನಿಮ್ಮ ನಡವಳಿಕೆಯು ಅನ್ಯ ಜನರ ಮಧ್ಯದಲ್ಲಿ ಯೋಗ್ಯವಾಗಿರಲಿ; ಆಗ ಅವರು ಯಾವ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಣ್ಣಾರೆ ಕಂಡು ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು** (1 ಪೇತ್ರ 2:12).

ಲೋಕದ ಜನರು ನಮ್ಮನ್ನು ಗಮನಿಸುವಾಗ ನಾವು ಪ್ರಾಮಾಣಿಕವಾಗಿದ್ದೇವೆಂಬುದನ್ನು ಅವರು ಗುರುತಿಸುವಂತೆ ನಾವಿರಬೇಕು. ಆ ಮಟ್ಟದ ಪ್ರಾಮಾಣಿಕತೆ ಮತ್ತು ಸತ್ಯತೆಯನ್ನು ನಾವು ಕಾಪಾಡಿಕೊಂಡಿರಬೇಕು. ಏಕೆಂದರೆ ಅವರು ನಮ್ಮನ್ನು ನೋಡುವಾಗ, ನಮ್ಮ ಕಡೆಗೆ ಬೆರಳು ಮಾಡಿ ತೋರಿಸುವುದಕ್ಕೆ ಅವರಿಗೆ ಯಾವುದೇ ಕಾರಣವಿರಬಾರದು.

**‘ದೇವರು ಸುಳ್ಳು ತುಟಿಗಳನ್ನು ಕೇವಲ ಸ್ವಭಾವದ ನ್ಯೂನತೆ ಎಂದು ಉದಾಸೀನ ಮಾಡುವುದಿಲ್ಲ ಮತ್ತು ಕ್ಷಮಿಸುವುದಿಲ್ಲ. ದೇವರಿಗೆ ಅಸಹ್ಯ’’ ಎನ್ನುವ ವಿಷಯ ಆತನು ಅದನ್ನು ಸಹಿಸುವುದೇ ಇಲ್ಲ ಎನ್ನುವುದನ್ನು ತಿಳಿಸುತ್ತದೆ.**

# 2

# ದೇವರು ಪರೀಕ್ಷಿಸುತ್ತಾನೆ ಮತ್ತು ನಮ್ಮ ಪ್ರಾಮಾಣಿಕತೆಯನ್ನು ಅರಿತಿದ್ದಾನೆ (ಅಥವಾ ಅದರ ಕೊರತೆಯನ್ನು)

ದೇವರು ನಮ್ಮ ಪ್ರಾಮಾಣಿಕತೆಯನ್ನು ಅರಿತಿದ್ದಾನೆ ಮತ್ತು ಪರೀಕ್ಷಿಸುತ್ತಾನೆ. ನಮ್ಮ ಸಭಾ ಪಾಲಕರಿಗೆ ನಮ್ಮ ಪ್ರಾಮಾಣಿಕತೆಯ ಮಟ್ಟ ತಿಳಿಯದೇ ಇರಬಹುದು. ನಾವು ಭಾನುವಾರ ಬೆಳಿಗ್ಗೆ ಸಭೆಗೆ ಹೋಗಿ, ದೇವರನ್ನು ಆರಾಧಿಸಿ, ನಮ್ಮ ವಿವರಗಳ ಬಗ್ಗೆ ಸುಳ್ಳು ವೃತ್ತಾಂತವನ್ನು ಬರೆದು ಕೊಡುವದು, ನಮ್ಮ ಸಭಾ ಪಾಲಕರಿಗೆ ತಿಳಿಯದೇ ಹೋಗಬಹುದು. ಆದರೆ ದೇವರಿಗೆ ಗೊತ್ತು. ಆತನಿಗೆ ನಮ್ಮ ಪ್ರಾಮಾಣಿಕತೆ ಅಥವಾ ಅದರ ಕೊರತೆಯ ಬಗ್ಗೆ ಗೊತ್ತು. (ಕೀರ್ತನೆಗಳು 7:8)ನೇ ವಾಕ್ಯದಲ್ಲಿ, ರಾಜನಾದ ದಾವೀದನು ''ಯೆಹೋವನೇ, ನಿರಪರಾಧಿಯೂ, ನೀತಿವಂತನೂ ಆಗಿರುವ ನನಗೋಸ್ಕರ ನ್ಯಾಯವನ್ನು ತೀರಿಸು'' ಎಂದು ಹೇಳುತ್ತಾನೆ.

ಕೀರ್ತನೆಗಳು 26:1, 2ರಲ್ಲಿ ದಾವೀದನು ''ಯೆಹೋವನೇ, ನನಗೋಸ್ಕರ ನ್ಯಾಯವನ್ನು ನಿರ್ಣಯಿಸು, ನಾನಾದರೋ ನಿರ್ದೋಷಿಯಾಗಿಯೇ ನಡೆದುಕೊಂಡಿದ್ದೇನೆ. ನಾನು ಕದಲದೆ ಯೆಹೋವನಲ್ಲೇ ಭರವಸೆಯಿಟ್ಟಿದ್ದೇನೆ. ಯೆಹೋವನೇ ನನ್ನನ್ನು ಪರೀಕ್ಷಿಸು, ಪರಿಶೀಲಿಸು. ನನ್ನ ಅಂತರಿಂದ್ರಿಯವನ್ನೂ, ಹೃದಯವನ್ನೂ ಪರಿಶೋಧಿಸು'' ಎಂದು ಪ್ರಾರ್ಥಿಸುತ್ತಾನೆ. ಎಂತಹ ಶಕ್ತಿಯುತವಾದ ಪ್ರಾರ್ಥನೆ! ಏಕೆಂದರೆ ದಾವೀದನು ಪ್ರಾಮಾಣಿಕತೆಯಲ್ಲಿ ನಡೆದನು. ಅವನಿಗೆ ನ್ಯಾಯವನ್ನು ನಿರ್ಣಯಿಸುವಂತೆ ದೇವರಲ್ಲಿ ಪ್ರಾರ್ಥನೆ ಮಾಡುವ ಮಟ್ಟದಲ್ಲಿ ಅವನು ಇದ್ದನು. ನಾವು ಆಗಾಗ್ಗೆ ''ನನ್ನ ಮೇಲಧಿಕಾರಿಗೆ ನಾನು ಸುಳ್ಳು ಹೇಳುವುದಿಲ್ಲ ಎಂದು ಹೇಳಿದರೆ, ನಾನು ಕೆಲಸವನ್ನು ಕಳೆದುಕೊಳ್ಳಬಹುದು'' ಎಂದು ಹೇಳುತ್ತೇವೆ. ನಿಮ್ಮ ಪ್ರಾಮಾಣಿಕತೆಗಾಗಿ ನೀವು ಕೆಲಸ ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದರೆ ದೇವರಿಗೆ ಸ್ತೋತ್ರ ಹೇಳಿರಿ, ಏಕೆಂದರೆ ಆಗ ನೀವೂ ದಾವೀದನ ರೀತಿಯಲ್ಲಿ ಪ್ರಾರ್ಥಿಸಬಹುದು ಮತ್ತು ನಿಮಗೆ ನ್ಯಾಯವನ್ನು ನಿರ್ಣಯಿಸುವಂತೆ ದೇವರಲ್ಲಿ ಕೇಳಿಕೊಳ್ಳಬಹುದು.

ಹೇಗಾದರೂ ಸರಿ, ನಾವು ಪ್ರಾಮಾಣಿಕತೆಯಲ್ಲಿ ನಡೆಯದೇ ಇದ್ದರೆ, ನಮಗೆ ನ್ಯಾಯವನ್ನು ನಿರ್ಣಯಿಸು ಎಂದು ದೇವರಲ್ಲಿ ನಾವು ಕೇಳಿಕೊಳ್ಳುವುದಕ್ಕೆ ಆಗುವುದಿಲ್ಲ. ಕೀರ್ತನೆಗಾರನ ಹಾಗೆ, ನಾವು ನಿರ್ದೋಷಿಯಾಗಿ ನಡೆದೆವು, ಪ್ರಾಮಾಣಿಕವಾಗಿ ಕೆಲಸ ಮಾಡಿದೆವು ಮತ್ತು ನಮಗೆ ಏನು ಸರಿ ಎಂದು ತಿಳಿದ ಮಟ್ಟಿಗೆ ಮಾಡಿದೆವು ಎಂದು ನಮಗೆ ಹೇಳುವುದಕ್ಕೆ ಸಾಧ್ಯವಾದರೆ, ಆಗ ದೇವರಲ್ಲಿ ನಮ್ಮ ಹೋರಾಟಗಳಿಗಾಗಿ ಹೋರಾಡುವುದಕ್ಕೆ ಕೇಳಬಹುದು.

**ಯೆಹೋವನು ಇಂತೆನ್ನುತ್ತಾನೆ - ನಾನು ಸಮೀಪದಲ್ಲಿ ಮಾತ್ರ ಇರುವ ದೇವರೋ? ದೂರದಲ್ಲಿಯೂ ಇರುವವನಲ್ಲವೋ? ನನ್ನ ಕಣ್ಣಿಗೆ ಬೀಳದಂತೆ ಯಾವನಾದರೂ ಗುಪ್ತ ಸ್ಥಳಗಳಲ್ಲಿ ತನ್ನನ್ನು ಮರೆ ಮಾಡಿಕೊಂಡಾನೆ? ನಾನು ಭೂಮ್ಯಾಕಾಶಗಳಲ್ಲಿಯೂ ವ್ಯಾಪಿಸಿರುವವನಲ್ಲವೆ.** (ಯೆರೆಮೀಯ 23:23,24).

ನನ್ನ ಕಣ್ಣಿಗೆ ಬೀಳದಂತೆ ಯಾವನಾದರೂ ಗುಪ್ತ ಸ್ಥಳಗಳಲ್ಲಿ ತನ್ನನ್ನು ಮರೆ ಮಾಡಿಕೊಂಡಾನೇ? ಎಂಬ ಕುತೂಹಲಕಾರಿಯಾದ ಪ್ರಶ್ನೆಯನ್ನು ದೇವರು ವಾಕ್ಯದಲ್ಲಿ ಕೇಳುತ್ತಿದ್ದಾರೆ. ದೇವರು ಒಂದು ಕ್ಷಣ ನಮ್ಮನ್ನು ಗಮನಿಸುತ್ತಿಲ್ಲ ಎಂದು ಊಹಿಸಿ, ನಾವು ಗುಪ್ತವಾಗಿ ನಮ್ಮ ವಂಚನೆಯ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಸಾಧ್ಯವಿಲ್ಲ. ಯಾವ ಮನುಷ್ಯನೂ ನಮ್ಮನ್ನು ಗಮನಿಸುತ್ತಿಲ್ಲದೆ ಇರಬಹುದು, ಆದರೆ ದೇವರು ನಮ್ಮನ್ನು ನೋಡದೆ ಇರುವಂತಹ ಯಾವ ಗುಪ್ತ ಸ್ಥಳಗಳೂ ಈ ಭೂಮಿಯ ಮೇಲಿಲ್ಲ. ನಾವು ನಮ್ಮ ಕಂಪ್ಯೂಟರ್ ಹಿಂದೆ ಕುಳಿತುಕೊಂಡು ತಿಂಗಳ ವರದಿಯಲ್ಲಿ ಎಲ್ಲಾ ತರಹದ ಸುಳ್ಳನ್ನು ಬರೆಯುತ್ತಾ, ಯಾರಿಗೂ ಏನೂ ಗೊತ್ತಾಗುವುದಿಲ್ಲ ಎಂದು ಅಂದುಕೊಳ್ಳಬಹುದು. ಆದರೆ ದೇವರು ಗಮನಿಸುತ್ತಾ ಇದ್ದಾರೆಂದು ಜ್ಞಾಪಕದಲ್ಲಿ ಇಟ್ಟುಕೊಳ್ಳಿ. ನಮ್ಮ ಹೃದಯದ ಪ್ರಾಮಾಣಿಕತೆ ಆತನಿಗೆ ಗೊತ್ತು ಮತ್ತು ಅದನ್ನು ಆತನು ಪರೀಕ್ಷಿಸುತ್ತಾನೆ.

**ನಾವು ಯಾವಾತನಿಗೆ ಲೆಕ್ಕವನ್ನು ಒಪ್ಪಿಸಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಇದೆ. ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ಸೃಷ್ಟಿಯು ಒಂದೂ ಇಲ್ಲ** (ಇಬ್ರಿಯರಿಗೆ 4:13).

ದೇವರಿಂದ ನಾವು ಯಾವುದನ್ನೂ ಬಚ್ಚಿಟ್ಟುಕೊಳ್ಳಲು ಆಗುವುದಿಲ್ಲ. ನಾವು ನೀತಿವಂತರಾಗಿಯೂ ಮತ್ತು ಪ್ರಾಮಾಣಿಕರಾಗಿಯೂ ಜೀವಿಸುವುದಕ್ಕೆ ಸಹಾಯಿಸುವ ದೇವರ ಪರಿಶುದ್ಧ ಭಯವಿರುವ ಸ್ಥಳಕ್ಕೆ ನಾವು ಬರುವುದು ಅವಶ್ಯಕವಾಗಿದೆ.

**ದೇವರಿಂದ ನಾವು ಬಚ್ಚಿಟ್ಟುಕೊಳ್ಳುವಂತಹುದು ಯಾವುದೂ ಇಲ್ಲ.**

# 3

# ನಮ್ಮ ಪ್ರಾಮಾಣಿಕತನದ ವಿಷಯದಲ್ಲಿ ನಾವು ಇನ್ನೂ ಏಕೆ ರಾಜಿ ಮಾಡಿಕೊಳ್ಳುತ್ತೇವೆ?

ಇದುವರೆಗೂ ನಾವು ಓದಿದ ವಿಷಯಗಳು ನಮ್ಮೆಲ್ಲರಿಗೆ ಬಹಳ ತಿಳಿದವುಗಳೇ. ನಾವು ಪ್ರಾಮಾಣಿಕರಾಗಿರಬೇಕೆಂತಲೂ, ನೀತಿಯಲ್ಲಿ ನಡೆಯಬೇಕೆಂದೂ, ಸುಳ್ಳು ಹೇಳುವುದು ತಪ್ಪು ಎಂದು ನಮ್ಮ ಬಾಲ್ಯದಿಂದಲೂ ನಮಗೆ ಹೇಳಿಕೊಡಲ್ಪಟ್ಟಿದೆ. ಇದುವರೆಗೂ ಪ್ರಸ್ತಾಪಿಸಿದ ಅನೇಕ ಸತ್ಯವೇದದ ವಚನಗಳನ್ನು ನಾವು ಚೆನ್ನಾಗಿ ತಿಳಿದಿರಬಹುದು. ನಮ್ಮ ಸತ್ಯವೇದದಲ್ಲಿ ಅವುಗಳನ್ನು ನಾವು ಬಣ್ಣದ ಶಾಯಿಯಲ್ಲಿ ಗುರುತಿಸಿರಬಹುದು!

ಆದರೆ ಈ ಕೆಳಗಿನ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳಬೇಕು:

- ಇನ್ನೂ ನಾವು ಏಕೆ ಸುಳ್ಳು ಹೇಳುತ್ತಿದ್ದೇವೆ?
- ನಾವು ಬಹಳ ಕಾಲದಿಂದಲೂ ಕ್ರಿಸ್ತೀಯರೇ ಆಗಿದ್ದಾಗ್ಯೂ, ನಮ್ಮ ಕೆಲಸದಲ್ಲಿ, ಸೇವೆಯಲ್ಲಿ ಮತ್ತು ಅನೇಕ ವಿಷಯಗಳಲ್ಲಿ ನಾವು ಇನ್ನೂ ಏಕೆ ಅಪ್ರಾಮಾಣಿಕರಾಗಿದ್ದೇವೆ? ಆಗಾಗ್ಗೆ ನಾವು ಜನರಿಗೆ ಒಂದು ನಿರ್ದಿಷ್ಟ ಕಾರಣಕ್ಕಾಗಿ ನಾವು ಹಣವನ್ನು ಸಂಗ್ರಹಿಸುತ್ತಿದ್ದೇವೆ ಎಂದು ಹೇಳಿ, ನಂತರ ಆ ಹಣವನ್ನು ಮತ್ತೊಂದು ಕೆಲಸಕ್ಕೆ ಉಪಯೋಗಿಸಿಕೊಳ್ಳುತ್ತೇವೆ.
- ಇದೆಲ್ಲವನ್ನೂ ಅರಿತ ಮತ್ತು ಇದೆಲ್ಲವನ್ನೂ ವಾಕ್ಯದಲ್ಲಿ ಓದಿರುವ ದೇವರ ಮಕ್ಕಳು ಏಕೆ ಇನ್ನೂ ಅಸತ್ಯವಂತರಾಗಿದ್ದಾರೆ?

ನಾವು ಇನ್ನೂ ಏಕೆ ಅಸತ್ಯದಲ್ಲಿ ನಡೆಯುತ್ತಿದ್ದೇವೆಂಬುದಕ್ಕೆ ಕೆಲವು ಕಾರಣಗಳಿವೆ. ಈ ಎಲ್ಲಾ ಕಾರಣಗಳು ನಮ್ಮ ಜೀವಿತದಲ್ಲಿ ನಾವು ಪ್ರಾಮಾಣಿಕತೆ, ಸತ್ಯತೆ ಮತ್ತು ನೀತಿವಂತಿಕೆಯನ್ನು ಕಾಪಾಡಿಕೊಳ್ಳದಂತೆ ತಡೆಯುತ್ತದೆ. ಇಲ್ಲಿ ಕೆಲವು ಸಂಭವಿಸಬಹುದಾದ ಕಾರಣಗಳಿವೆ:

## ಯಥಾರ್ಥವಾದ ದೇವರ ಭಯವಿಲ್ಲ - ದೇವರ ಕೃಪೆಯನ್ನು ಬೇಕಾಬಿಟ್ಟಿಯಾಗಿ ತೆಗೆದುಕೊಳ್ಳುವುದು

ದೇವರ ಕ್ಷಮಾಪಣೆ, ಕೃಪೆ, ಸ್ಥಿರವಾದ ಪ್ರೀತಿ, ಒಳ್ಳೆಯತನವನ್ನು ತಿಳಿಸುವ ವಚನಗಳಿಗೆ ನಾವು ಬಹಳ ಪರಿಚಯಸ್ಥರಾಗರುವುದರಿಂದ ಕೆಲವು ಸಲ ನಾವು ಅದನ್ನು ಬೇಕಾಬಿಟ್ಟಿಯಾಗಿ ತೆಗೆದುಕೊಳ್ಳಲು ಉದ್ದೇಶಿಸುತ್ತೇವೆ. ನಾವು ಸುಳ್ಳು ಮತ್ತು ಅಪ್ರಾಮಾಣಿಕತೆಯನ್ನು ಮುಂದುವರಿಸಿದಾಗಲೂ ದೇವರು ನಮ್ಮನ್ನು ಕ್ಷಮಿಸುತ್ತಾನೆ ಎಂದು ಅಂದುಕೊಳ್ಳುತ್ತೇವೆ. ನಮ್ಮ ಜೀವಿತದಲ್ಲಿ ಯಥಾರ್ಥವಾದ ದೇವರ ಭಯವಿಲ್ಲ. (ಜ್ಞಾನೋಕ್ತಿಗಳು 16:6)ರಲ್ಲಿ ಕೃಪಾ ಸತ್ಯತೆಗಳಿಂದ ಪಾಪ ನಿವಾರಣೆ, ಯೆಹೋವನ ಭಯ ಭಕ್ತಿಯಿಂದ ಹಾನಿ ನಿವಾರಣೆ ಎಂದು ದೇವರ ವಾಕ್ಯ ಹೇಳುತ್ತದೆ. ಯಥಾರ್ಥವಾದ ದೇವರ ಭಯ ಮಾತ್ರ ಒಬ್ಬ ಮನುಷ್ಯನು ದುಷ್ಕೃತ್ಯಗಳನ್ನು ಬಿಡುವಂತೆ ಮಾಡುತ್ತದೆ. ಪಾಪಗಳಾದ - ಅಪ್ರಾಮಾಣಿಕತೆ, ಅಸತ್ಯ, ಅನೀತಿಗಳಲ್ಲಿ ಚೆಲ್ಲಾಟ ಆಡುವುದನ್ನು ನಾವು ತಪ್ಪಿಸಿಕೊಳ್ಳಬೇಕಾದರೆ, ದೇವರಲ್ಲಿ ಅತ್ಯಧಿಕವಾದ ಭಯ ಮತ್ತು ಗೌರವವನ್ನು ನಾವು ಹೊಂದಿರಬೇಕು.

ಯಾವಾಗ ದೇವರ ಭಯವಿಲ್ಲದೆ ಇರುತ್ತದೋ ಆಗ ನಾವು ನಮಗೆ ಏನೇನು ಸರಿ ಎನಿಸುತ್ತದೋ ಅದನ್ನು ಮಾಡುತ್ತೇವೆ. ನಾವು ದೇವರ ಕೃಪೆಯನ್ನು ಅರಿತುಕೊಳ್ಳುತ್ತೇವೆ ನಿಜ. ಆದರೆ ಅದೇ ಸಮಯದಲ್ಲಿ ನಮ್ಮ ಹೃದಯದಲ್ಲಿ ದೇವರ ಭಯವಿರಬೇಕು.

ಕೆಲವು ಸೇವಕರು ಮತ್ತು ಉಪದೇಶಕರಿಗೆ ಅವರ ಜೀವಿತದಲ್ಲಿ ದೇವರ ಭಯ ಇಲ್ಲದೆ ವೇದಿಕೆಯಿಂದ ಕೆಳಗಿಳಿದು ಬಂದ ನಂತರ ಸುಳ್ಳನ್ನು ಆಡುವುದಕ್ಕೆ ಮತ್ತು ಎಲ್ಲಾ ತರಹದ ತಪ್ಪು ಕೆಲಸಗಳನ್ನು ಮಾಡುವುದಕ್ಕೆ ಹಿಂಜರಿಯದೆ ಇರುವುದು ನಿಜವಾಗಿಯೂ ಬೇಸರದ ಸಂಗತಿಯಾಗಿದೆ. ಸೇವಕರಾದ ನಮಗೇ ದೇವರ ಭಯ ಇಲ್ಲದಿರುವಾಗ, ನಾವು ಬೇರೆ ಜನಗಳಿಗೆ ದೇವರ ಭಯ ಇರಬೇಕೆಂದು ಹೇಳಿಕೊಡುವುದು ಹೇಗೆ ಸಾಧ್ಯ? ದೇವರ ಭಯ ಇರುವಂತಹ ಸ್ಥಾನಕ್ಕೆ ನಾವು ಬರುವುದು ಅಗತ್ಯವಾಗಿದೆ.

## ಮನುಷ್ಯನ ಭಯ

ಕೆಲವು ಸಲ ಮನುಷ್ಯನ ಭಯದಿಂದ ನಾವು ಸುಳ್ಳು ಹೇಳುತ್ತೇವೆ. - ಅವರಿಗೆ ನಾವು ಸತ್ಯವನ್ನು ಹೇಳಿದರೆ ಅವರು ಹೇಗೆ ಪ್ರತಿಕ್ರಿಯಿಸಬಹುದೆಂದು ನಾವು ಭಯಪಡುತ್ತೇವೆ. ನಮಗಿರುವ ಮನುಷ್ಯನ ಭಯವನ್ನು ನಾವು ಜಯಿಸಬೇಕಾಗಿದೆ. ನಾವು ಯಾರ ಜೊತೆ ವ್ಯವಹರಿಸುತ್ತಿದ್ದೇನೆ ಎಂದು ಗಣನೆಗೆ ತೆಗೆದುಕೊಳ್ಳದೆ, ಸತ್ಯವನ್ನು ಮಾತನಾಡುವುದಕ್ಕೆ ಮತ್ತು ನೀತಿಯಲ್ಲಿ ನಡೆಯುವುದಕ್ಕೆ ನಾವು ಹೆದರಬಾರದು!

## ಭಯದ ಪರಿಣಾಮ

''ಇಂಥ ಸ್ಥಿತಿಯಲ್ಲಿ ನಾನು ಸುಳ್ಳು ಹೇಳದಿದ್ದರೆ, ನಾನು ಅದರಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇನೆ. ಆದ್ದರಿಂದ ಸುಳ್ಳು ಹೇಳಿ ತಪ್ಪಿಸಿಕೊಳ್ಳುವುದೇ ಒಳ್ಳೆಯದು ಎಂಬುದು'' ಸುಳ್ಳು ಹೇಳುವುದಕ್ಕೆ ಜನರಿಗೆ ಇನ್ನೊಂದು ನೆಪವಾಗಿದೆ. ಯಾವುದೇ ಪರಿಣಾಮವನ್ನು ಗಣನೆಗೆ ತೆಗೆದುಕೊಳ್ಳದೆ ಸತ್ಯದಲ್ಲಿ ನಡೆಯುವುದಕ್ಕೆ ನಾವು ಧೈರ್ಯವಾಗಿರಬೇಕು. ನೆನಪಿನಲ್ಲಿ ಇಟ್ಟುಕೊಳ್ಳಿರಿ, ನಾವು ಸತ್ಯದಲ್ಲಿ ನಡೆಯುವಾಗ, ದೇವರು ನಮ್ಮ ಪಕ್ಷದಲ್ಲಿರುತ್ತಾರೆ.

## ಪ್ರಸಿದ್ಧಿ/ದುರಭಿಮಾನ

ಕೆಲವು ಸಲ ಪೇಚಿನಲ್ಲಿರುವ ನಮ್ಮ ಖ್ಯಾತಿ (ಪ್ರಸಿದ್ಧಿ) ಮತ್ತು ದುರಭಿಮಾನವನ್ನು ಕಾಪಾಡಿಕೊಳ್ಳುವ ಸಲುವಾಗಿ ನಾವು ಸುಳ್ಳು ಹೇಳುತ್ತೇವೆ. ಉದಾಹರಣೆಗೆ, ಯಾರಾದರೂ ನಮ್ಮನ್ನು ನಿಮ್ಮ ಪರೀಕ್ಷೆಯಲ್ಲಿ ನೀವು ಉತ್ತೀರ್ಣರಾಗಿದ್ದೀರಾ ಎಂದು ಕೇಳಿದರೆ ಅದು ಸುಳ್ಳಾಗಿದ್ದರೂ, ನಾವು ಸುಲಭವಾಗಿ ''ಹೌದು'' ಎಂದು ಹೇಳುತ್ತೇವೆ.

## ಮನವರಿಕೆಯ ಬದಲು ಅನುಕೂಲಕ್ಕೆ ತಕ್ಕಂತೆ ಜೀವಿಸುವುದು

ಮನವರಿಕೆಯ ಪ್ರಕಾರ ಜೀವಿಸುವುದಕ್ಕೆ ಹೆಚ್ಚಿನ ಶ್ರಮ ಪಡಬೇಕಾಗಿರುವುದರಿಂದ ನಾವು ಮನವರಿಕೆ ಮಾಡಿಕೊಳ್ಳುವುದಕ್ಕೆ ಬದಲಾಗಿ ಅನುಕೂಲಕ್ಕೆ ತಕ್ಕಂತೆ ಜೀವಿಸಲು ಉದ್ದೇಶಿಸುತ್ತೇವೆ. ಎಲ್ಲಾ ಸಮಯದಲ್ಲಿ ನಾವು ಸತ್ಯವನ್ನೇ ಮಾತನಾಡಬೇಕೆಂಬುದು ನಮಗೆ ಮನದಟ್ಟಾದಾಗ, ಎಷ್ಟೇ ಬೆಲೆಯುಳ್ಳ ವಿಷಯವಾದರೂ, ನಾವು ಸತ್ಯವನ್ನೇ ಮಾತನಾಡಬೇಕು. ಸುಲಭವಾಗಿದ್ದರೆ, ನಾನು ನಿಜವನ್ನು ಹೇಳುತ್ತೇನೆ : ಕಷ್ಟಕರವಾಗಿರುವುದಾದರೆ ಸುಳ್ಳನ್ನು ಹೇಳುತ್ತೇನೆ ಎಂದು ಅನುಕೂಲಕ್ಕಾಗಿ

ಹೇಳುತ್ತಾರೆ. ದಯವಿಟ್ಟು ನಿಮಗೆ ನೀವೇ ನಾನು ಮನವರಿಕೆಯ ಪ್ರಕಾರ ಜೀವಿಸುತ್ತೇನೆ ಎಂದು ಹೇಳಿಕೊಳ್ಳಿರಿ. ನಾವು ಮನವರಿಕೆಯ ಪ್ರಕಾರ ಜೀವಿಸಬೇಕೇ ಹೊರತು ಅನುಕೂಲಕ್ಕೆ ತಕ್ಕಂತೆ ಅಲ್ಲ. ನಾವು ಸತ್ಯ, ಪ್ರಾಮಾಣಿಕತೆ ಮತ್ತು ದೃಢ ನಿಶ್ಚಯದ ಗಂಡು ಮತ್ತು ಹೆಣ್ಣುಗಳಾಗಿರಬೇಕೆಂಬುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು.

## ಮನ ನೋಯಿಸುವುದಕ್ಕೆ / ಅತೃಪ್ತಿಪಡಿಸುವುದಕ್ಕೆ ಭಯ

ಕೆಲವು ಸಲ ಜನರು ತಾವು ಮಾತನಾಡುತ್ತಿರುವ ವ್ಯಕ್ತಿಗೆ ನೋವಾಗಬಾರದು ಎಂದು ಸುಳ್ಳನ್ನು ಹೇಳುತ್ತಾರೆ. ನೀನು ಒಳ್ಳೆಯ ಉದ್ದೇಶದಿಂದ ಮಾಡಿರುವುದಾದರೂ - ಸುಳ್ಳು ಸುಳ್ಳೆ, ಸುಳ್ಳು ಸುಳ್ಳೆ!

## ಮುಚ್ಚುವುದರ ಮುಖಾಂತರ ಒಳ್ಳೆಯವರಾಗಿರುವುದಕ್ಕೆ ಪ್ರಯತ್ನಿಸುವುದು

ಕೆಲವು ಸಲ ಜನರು ತಮ್ಮ ಸ್ನೇಹಿತರ ತಪ್ಪನ್ನು ಮುಚ್ಚಿಡುವ ಪ್ರಯತ್ನದಿಂದ ಸುಳ್ಳಾಡುತ್ತಾರೆ. ನೀನು ಎಷ್ಟೇ ಯಥಾರ್ಥತೆಯುಳ್ಳವನಾಗಿದ್ದರೂ ಗಣನೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ - ಏಕೆಂದರೆ ಸುಳ್ಳು ಸುಳ್ಳೇ, ಸುಳ್ಳು ಸುಳ್ಳೇ! ಸತ್ಯ ತನ್ನಷ್ಟಕ್ಕೆ ತಾನೇ ನಿಂತುಕೊಳ್ಳುತ್ತದೆ ಎಂಬುದನ್ನು ನೆನಪಿಟ್ಟುಕೊಳ್ಳಿರಿ! ಸುಳ್ಳಿನ ಮುಖಾಂತರ ರಕ್ಷಿಸಿಕೊಳ್ಳಬೇಕಾದ ಅವಶ್ಯಕತೆ ಸತ್ಯಕ್ಕೆ ಬೇಕಾಗಿಲ್ಲ.

**ಯಥಾರ್ಥವಾದ ದೇವರ ಭಯ ಮಾತ್ರ ಒಬ್ಬ ಮನುಷ್ಯನ ದುಷ್ಕೃತ್ಯಗಳನ್ನು ಬಿಡುವಂತೆ ಮಾಡುತ್ತದೆ. ಪಾಪಗಳಾದ - ಅಪ್ರಾಮಾಣಿಕತೆ, ಸುಳ್ಳು ಮತ್ತು ಅನೀತಿಯಲ್ಲಿ ನಾವು ಚೆಲ್ಲಾಟ ಆಡುವುದನ್ನು ತಪ್ಪಿಸಿಕೊಳ್ಳಬೇಕಾದರೆ, ದೇವರಲ್ಲಿ ಅತ್ಯಧಿಕವಾದ ಭಯ ಮತ್ತು ಗೌರವವನ್ನು ಹೊಂದಿರಬೇಕು. ನಮ್ಮಲ್ಲಿ ದೇವರ ಭಯ ಇಲ್ಲದೆ ಹೋದರೆ, ನಮಗೆ ಇಷ್ಟ ಬಂದದ್ದನ್ನು ನಾವು ಮಾಡುತ್ತೇವೆ.**

# 4

# ಅಪ್ರಾಮಾಣಿಕತನದ ಪರಿಣಾಮಗಳು

ನಾವು ಪ್ರಾಮಾಣಿಕತೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದಕ್ಕೆ ಏಕೆ ಉದ್ದೇಶಿಸುತ್ತೇವೆ ಎನ್ನುವುದಕ್ಕೆ ಇನ್ನೊಂದು ಕಾರಣ ಪ್ರಾಮಾಣಿಕತನದ ಗಂಭೀರ ಪರಿಣಾಮಗಳನ್ನು ನಾವು ನಿಜವಾಗಿ ಅರಿಯದೇ ಇರುವುದರಿಂದಲೇ. ನಾವು ದೇವರ ಬಳಿಗೆ ಹೋಗಿ ದೇವರಲ್ಲಿ ಕ್ಷಮೆ ಯಾಚಿಸಿದರೆ ಎಲ್ಲವೂ ಸರಿ ಹೋಗುತ್ತದೆ ಎಂದು ಅನೇಕ ಸಲ ಅಂದುಕೊಳ್ಳುತ್ತೇವೆ. ಹೌದು ದೇವರು ನಮ್ಮನ್ನು ಕ್ಷಮಿಸುತ್ತಾನೆ. ಆದರೆ ನಾವು ಅದರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ದೇವರು ಎಲ್ಲಾ ಪರಿಣಾಮಗಳನ್ನು ಬದಲಾಯಿಸುವುದಿಲ್ಲ. ನಾವು ಬಿತ್ತಿದಕ್ಕೆ ಪರಿಣಾಮಗಳನ್ನು ನಾವೇ ಕೊಯ್ಯಬೇಕು. ಅಪ್ರಾಮಾಣಿಕತೆಯ ಪರಿಣಾಮಗಳನ್ನು ನಾವು ಸಂಪೂರ್ಣವಾಗಿ ಅರಿತುಕೊಳ್ಳುವ ಅವಶ್ಯಕತೆ ಇದೆ.

**ಕಳ್ಳ ಸಾಕ್ಷಿಯು ದಂಡನೆಯನ್ನು ಹೊಂದದಿರನು;** (ಜ್ಞಾನೋಕ್ತಿಗಳು 19:5)

ಅನೇಕ ಸಲ ನಾನು ತಪ್ಪಿಸಿಕೊಳ್ಳುವುದಕ್ಕೆ ಸುಳ್ಳನ್ನು ಉಪಯೋಗಿಸುತ್ತೇವೆ. ಆದರೆ ಸುಳ್ಳಾಡುವವನು ತಪ್ಪಿಸಿಕೊಳ್ಳನು ಎಂದು ದೇವರ ವಾಕ್ಯ ಜ್ಞಾನೋಕ್ತಿ 19:5ರಲ್ಲಿ ಹೇಳಿರುವ ವಾಕ್ಯವನ್ನು ನಾವು ಗ್ರಹಿಸಿಕೊಂಡಿಲ್ಲ. ಸುಳ್ಳು ಹೇಳುವುದರ ಮುಖಾಂತರ ಒಂದು ನಿರ್ದಿಷ್ಟ ಪರಿಸ್ಥಿತಿಯಿಂದ ತಪ್ಪಿಸಿಕೊಂಡಿದ್ದಕ್ಕೆ ನಾವು ಸಂತೋಷಪಡಬಹುದು. ಆದರೆ ನಾವು ಪಶ್ಚಾತ್ತಾಪಪಟ್ಟು ನಮ್ಮ ಸುತ್ತಲಿನ ವಿಷಯಗಳಲ್ಲಿ ಸರಿಯಾಗಿ ವ್ಯವಹರಿಸುವವರೆಗೂ ಅದು ನಮ್ಮನ್ನು ಶೀಘ್ರದಲ್ಲಿ ಅಥವಾ ನಂತರದಲ್ಲಿ ಹಿಡಿಯುತ್ತದೆ ಎಂಬುದನ್ನು ನಾವು ಗ್ರಹಿಸಿಕೊಂಡಿಲ್ಲ.

- ನಮ್ಮನ್ನು ನಾವೇ ಇನ್ನೂ ದೊಡ್ಡ ಬಲೆಯಲ್ಲಿ ಸಿಕ್ಕಿಸಿ ಹಾಕಿಕೊಳ್ಳುತ್ತೇವೆಂದು ಗ್ರಹಿಸದೆ, ಕಷ್ಟಕರವಾದ ಪರಿಸ್ಥಿತಿಯಿಂದ ಪಾರಾಗುವುದಕ್ಕೆ ನಾವು ಆಗಾಗ್ಗೆ ಸುಳ್ಳು ಹೇಳುತ್ತೇವೆ.

**ಮೋಸದಿಂದ ಸಿಕ್ಕಿದ ಆಹಾರವು ಮನುಷ್ಯನಿಗೆ ರುಚಿ. ಆಮೇಲೆ ಅವನ ಬಾಯಿ ಮರಳಿನಿಂದ ತುಂಬುವುದು** (ಜ್ಞಾನೋಕ್ತಿಗಳು 20:17).

ಮೋಸದಿಂದ ಸಂಪಾದಿಸಿದ ಆಹಾರವು ಪ್ರಾರಂಭದಲ್ಲಿ ಸಿಹಿಯಾಗಿರಬಹುದು. ಆದರೆ ಅದು ಮೋಸದಿಂದ ಸಂಪಾದಿಸಲ್ಪಟ್ಟಿದ್ದರೆ, ''ನಂತರ ಅವನ ಬಾಯಿ ಮರಳಿನಿಂದ ತುಂಬುವುದು'' ಎಂದು ಸತ್ಯವೇದದ ಜ್ಞಾನೋಕ್ತಿಗಳು 20:17ರಲ್ಲಿ ಹೇಳುತ್ತದೆ. ಕೆಲಸದಲ್ಲಿ ಬರೀ ಆರು ತಿಂಗಳು ಅನುಭವವಿರುವಾಗ ರೆಸ್ಯೂಮ್‌ನಲ್ಲಿ ನನಗೆ 6 ವರ್ಷದ ಅನುಭವವಿದೆ ಎಂದು ಬರೆಯುವುದು ವಂಚನೆಯಾಗಿದೆ. ಮೋಸದಿಂದ ಸಂಪಾದಿಸಿದ ಹಣ ಎಂದರೆ, ಪ್ರಾರಂಭದಲ್ಲಿ ಸಿಹಿಯಾಗಿರುವುದಾದರೂ ನಂತರ ಬಾಯಲ್ಲಿ ಅದು ಮರಳಿನಂತಿರುವುದು. ಜ್ಞಾನೋಕ್ತಿಗಳು 21:6 ಸಹ ''ಸುಳ್ಳಿನಿಂದ ಸಿಕ್ಕಿದ ಸಂಪತ್ತು ಹಬೆಯಂತೆ ಅಸ್ಥಿರ, ಮೃತ್ಯುಪಾಶದಂತೆ ನಾಶಕರ'' ಎನ್ನುವ ಸತ್ಯವನ್ನು ನಮಗೆ ತಿಳಿಸುತ್ತದೆ. ನಾವು ಮೋಸದಿಂದ ಸಂಪಾದಿಸಿದ ಸಂಪತ್ತು ನಮ್ಮನ್ನು ಮರಣ ಮತ್ತು ನಾಶನದ ಕಡೆಗೆ ನಡೆಸುತ್ತದೆ ಮತ್ತು ಅಂತಹ ಸಂಪತ್ತು ಬೇಗನೆ ಕಾಣದೇ ಹೋಗುವುದು.

- ವಂಚನೆಯು ''ಬೇಗ ಮತ್ತು ಸುಲಭ''ದ ದಾರಿಯ ಹಾಗೆ ಕಾಣಬಹುದು. ಆದರೆ ಪರಿಣಾಮ ನಮ್ಮನ್ನು ಬೇಗನೇ ಹಿಡಿದುಕೊಳ್ಳುವುದು.

**ಸುಳ್ಳಿಗೆ ಕಿವಿಗೊಡುವ ಅಧಿಪತಿಯ ಸೇವಕರೆಲ್ಲಾ ದುಷ್ಟರೇ** (ಜ್ಞಾನೋಕ್ತಿಗಳು 29:12).

- ನಾಯಕತ್ವದಲ್ಲಿರುವ ವ್ಯಕ್ತಿಯು ಅಪ್ರಾಮಾಣಿಕನಾಗಿದ್ದರೆ, ಅವನ ಕೈ ಕೆಳಗಿರುವವರೆಲ್ಲಾ ಅದೇ ಹಾದಿಯಲ್ಲಿ ಅವನನ್ನು ಹಿಂಬಾಲಿಸುತ್ತಾರೆ.

**ನೀತಿಯ ಬೀಜವನ್ನು ಬಿತ್ತಿರಿ, ಪ್ರೀತಿಯ ಫಲವನ್ನು ಕೊಯ್ಯಿರಿ: ಗೆಯ್ಯದ ನಿಮ್ಮ ಭೂಮಿಯನ್ನು ಗೆಯ್ಯಿರಿ; ಯೆಹೋವನು ಬಂದು ನಮ್ಮ ಮೇಲೆ ನೀತಿಯನ್ನು ವರ್ಷಿಸಲೆಂದು ಆತನನ್ನು ಶರಣು ಹೋಗುವ ಸಮಯವು ಒದಗಿದೆ. ನೀವು ಮಾಡಿದ ವ್ಯವಸಾಯವು ದುಷ್ಟತನ, ನಿಮಗಾದ ಬೆಳೆಯು ಅನ್ಯಾಯ; ನೀವು ನಿಮ್ಮ ಕಟ್ಟುಪಾಡಿನಲ್ಲಿಯೂ ನಿಮ್ಮ ಶೂರರ ಬಾಹುಳ್ಯದಲ್ಲಿಯೂ ಭರವಸೆಯಿಟ್ಟಿದ್ದರಿಂದ ಮೋಸದ ಫಲವನ್ನು ಅನುಭವಿಸಿದ್ದೀರಿ.** (ಹೋಶೇಯ 10:12,13).

ಹೋಶೇಯ 10:12,13 ನಮಗೆ ಬಹಳ ಸ್ವಾರಸ್ಯಕರವಾದ ಸತ್ಯವನ್ನು ಹೇಳುತ್ತದೆ. ನಾವು ಸುಳ್ಳು ಹೇಳಿದಾಗೆಲ್ಲಾ ನಾವು ಅನೀತಿಯನ್ನು, ದುಷ್ಟತನವನ್ನು

ಬಿತ್ತುತ್ತಿರುತ್ತೇವೆ ಮತ್ತು ಶೀಘ್ರದಲ್ಲಿ ಅಥವಾ ನಂತರದಲ್ಲಿ ನಮ್ಮ ಸುಳ್ಳಿನ ಫಲವನ್ನು ನಾವು ತಿನ್ನಲು ಹೋಗುತ್ತೇವೆ. ಸುಳ್ಳು ಅದರ ಫಲವನ್ನು ಉತ್ಪತ್ತಿ ಮಾಡುತ್ತದೆ ಮತ್ತು ನಾವು ಅದನ್ನು ತಿನ್ನುತ್ತೇವೆ. ಆದ್ದರಿಂದ ನಮ್ಮ ಸುಳ್ಳು ಮತ್ತು ಅಪ್ರಾಮಾಣಿಕತೆಗೆ ತಕ್ಕ ಫಲವಿದೆಯೆಂದು ನಾವು ಅರಿತುಕೊಳ್ಳಬೇಕು.

- ನಾವು ಬಿತ್ತುವ ಪ್ರತಿಯೊಂದು ಸುಳ್ಳಿಗೂ ''ಸುಳ್ಳಿನ ಫಲ'' ಇರುತ್ತದೆ!

**ಸೈತಾನನು ನಿಮ್ಮ ತಂದೆ; ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು ನಿಮ್ಮ ತಂದೆಯ ದುರಿಚ್ಛೆಗಳನ್ನೇ ನಡೆಸಬೇಕೆಂದಿದ್ದೀರಿ. ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲಿಲ್ಲ; ಅವನಲ್ಲಿ ಸತ್ಯವು ಇಲ್ಲವೇ ಇಲ್ಲ. ಅವನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ; ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲ ಪುರುಷನೂ ಆಗಿದ್ದಾನೆ** (ಯೋಹಾನ 8:44).

- ನಾವು ಸುಳ್ಳಾಡಿದಾಗ, ಸೈತಾನನ ಕಾರ್ಯಗಳಲ್ಲಿ ಭಾಗಿಗಳಾಗಿರುತ್ತೇವೆ!

ಉಗ್ರವಾದ ಪರಿಣಾಮ - ಸುಳ್ಳುಗಾರರು ಬೆಂಕಿಯ ಕೆರೆಗೆ ದೊಬ್ಬಲ್ಪಡುತ್ತಾರೆ ಎಂದು ಸತ್ಯವೇದ ಹೇಳುತ್ತದೆ.

**ಆದರೆ ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟಗಾರರು, ವಿಗ್ರಹಾರಾಧಕರು ಮತ್ತು ಸುಳ್ಳುಗಾರರು. ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳು, ಉರಿಯುವ ಕೆರೆಯೇ; ಅದು ಎರಡನೆಯ ಮರಣವು** (ಪ್ರಕಟಣೆ 21:8).

ನಾವು ನಂಬಿಕೆಯ ಮೂಲಕ ಆತನ ಕೃಪೆಯಿಂದ ರಕ್ಷಣೆಯನ್ನು ಹೊಂದಿದ್ದೇವೆಂದು ಸತ್ಯವೇದ ಹೇಳುತ್ತದೆ. ಕರ್ತನಾದ ಯೇಸು ಕ್ರಿಸ್ತನ ಜ್ಞಾನದೊಳಗೆ ಬರುವ ಪ್ರತಿಯೊಬ್ಬ ವ್ಯಕ್ತಿಯೂ ರಕ್ಷಣೆ ಹೊಂದುತ್ತಾನೆ ಮತ್ತು ಕ್ರಿಸ್ತನಲ್ಲಿ ಕೃಪೆ, ದಯೆ, ಕ್ಷಮಾಪಣೆ ಮತ್ತು ರಕ್ಷಣೆ ಇದೆ ಎಂದು ಸತ್ಯವೇದವು ಹೇಳುತ್ತದೆ. ಹೇಗಾದರೂ ಸರಿ, ದೇವರಿಂದ ತಿಳಿಸಲ್ಪಟ್ಟ ವಿಶೇಷವಾದ ಉಗ್ರವಾದ ಪರಿಣಾಮ ಒಂದಿದೆ - ಅದೇನೆಂದರೆ ನಾವು ಸುಳ್ಳುಗಾರರಾಗಿದ್ದರೆ ನರಕಕ್ಕೆ ದೊಬ್ಬಲ್ಪಡುತ್ತೇವೆಂಬುದೇ ಆಗಿದೆ (ಪ್ರಕಟಣೆ 21). ಸೈತಾನನು ಸುಳ್ಳಿಗೆ ತಂದೆಯಾಗಿದ್ದಾನೆ ಮತ್ತು ಅವನಲ್ಲಿ ಸತ್ಯವೆಂಬುದು ಇಲ್ಲವೇ ಇಲ್ಲ (ಯೋಹಾನ 8:44) ಆದ್ದರಿಂದ ದೇವರು ಸುಳ್ಳುಗಾರರಿಗೆ, ''ನೀವು ಸುಳ್ಳು ಹೇಳುವುದನ್ನು ಮುಂದುವರಿಸುವುದಾದರೆ, ''ಹೋಗಿ ನಿಮ್ಮ ತಂದೆಯ ಜೊತೆಯಲ್ಲಿ ಇರಿ'' ಎಂದು ಹೇಳುತ್ತಾರೆ. ಸತ್ಯವನ್ನು ಮಾತನಾಡದೆ ಸುಳ್ಳು ಹೇಳುವವರಿಗೆ ಪರಿಣಾಮ ಬಹಳ ಉಗ್ರವಾಗಿರುತ್ತದೆ! ಈಗಿನ ಲೋಕದಲ್ಲಿ ಮತ್ತು ಮುಂದೆ ಬರುವ ಲೋಕದಲ್ಲಿ

ಅಪ್ರಾಮಾಣಿಕತನಕ್ಕೆ ತನ್ನದೇ ಆದ ಕಾರ್ಯದ ಫಲಗಳು ಇವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ''ದೇವರೇ ನನಗೆ ದುಷ್ಟತ್ವವನ್ನು ಬಿತ್ತುವುದು ಬೇಡ, ನನ್ನ ಸುಳ್ಳಿನ ಫಲ ತಿನ್ನುವುದು ಬೇಡ, ಅನ್ಯಾಯ ಮತ್ತು ದುಷ್ಟತ್ವವನ್ನು ಕೊಯ್ಯುವುದು ನನಗೆ ಬೇಡ'' ಎಂದು ಹೇಳುವುದಕ್ಕೆ ನಡೆಸುವಂತಹ ಪವಿತ್ರ ಭಯವನ್ನು ಇದು ನಮ್ಮಲ್ಲಿ ಉಂಟು ಮಾಡಬೇಕು.

- ಅಂತ್ಯದ ಪರಿಣಾಮ - ಸುಳ್ಳುಗಾರರು ನರಕಕ್ಕೆ ಹೋಗುತ್ತಾರೆ.

## ಅಪ್ರಾಮಾಣಿಕತೆಯ ಪರಿಣಾಮಗಳು

- **ನಮ್ಮನ್ನು ನಾವೇ ಇನ್ನೂ ದೊಡ್ಡ ಬಲೆಯಲ್ಲಿ ಸಿಕ್ಕಿಸಿ ಹಾಕಿಕೊಳ್ಳುತ್ತೇವೆಂದು ಗ್ರಹಿಸದೆ, ಕಷ್ಟಕರವಾದ ಪರಿಸ್ಥಿತಿಯಿಂದ ಪಾರಾಗುವುದಕ್ಕೆ ನಾವು ಆಗಾಗ್ಗೆ ಸುಳ್ಳು ಹೇಳುತ್ತೇವೆ!**
- **ಅಪ್ರಾಮಾಣಿಕತೆಯು ''ಬೇಗ ಮತ್ತು ಸುಲಭ''ದ ದಾರಿಯ ಹಾಗೆ ಕಾಣಬಹುದು. ಆದರೆ ಅದರ ಪರಿಣಾಮ ನಮ್ಮನ್ನು ಬೇಗನೆ ಹಿಡಿದುಕೊಳ್ಳುವುದು!**
- **ನಾಯಕತ್ವದಲ್ಲಿರುವ ವ್ಯಕ್ತಿಯು ಅಪ್ರಾಮಾಣಿಕನಾಗಿದ್ದರೆ, ಅವನ ಕೈ ಕೆಳಗಿನವರೆಲ್ಲಾ ಅದೇ ಹಾದಿಯಲ್ಲಿ ಅವನನ್ನು ಹಿಂಬಾಲಿಸುತ್ತಾರೆ!**
- **ನಾವು ಬಿತ್ತುವ ಪ್ರತಿಯೊಂದು ಸುಳ್ಳಿಗೂ ''ಸುಳ್ಳಿನ ಫಲ'' ಇರುತ್ತದೆ!**
- **ನಾವು ಸುಳ್ಳಾಡಿದಾಗ, ಸೈತಾನನ ಕಾರ್ಯಗಳಲ್ಲಿ ಭಾಗಿಗಳಾಗಿರುತ್ತೇವೆ!**
- **ಅಂತ್ಯದ ಪರಿಣಾಮ - ಸುಳ್ಳುಗಾರರು ನರಕಕ್ಕೆ ಹೋಗುತ್ತಾರೆ!**

# 5

# ಪ್ರಾಮಾಣಿಕತೆಯ ಆಶೀರ್ವಾದಗಳು

ಪ್ರಾಮಾಣಿಕತೆಯಲ್ಲಿ, ನೀತಿಯಲ್ಲಿ ಮತ್ತು ಸತ್ಯತೆಯಲ್ಲಿ ನಡೆಯುವವರಿಗೆ ಅದ್ಭುತವಾದ ಆಶೀರ್ವಾದಗಳು ಇವೆ.

## ಆಶೀರ್ವಾದ ಮತ್ತು ದಯೆ

‘‘**ಯೆಹೋವನೇ, ನೀತಿವಂತನನ್ನು ಆಶೀರ್ವದಿಸುವವನು ನೀನೇ, ನಿನ್ನ ದಯವು ಅವನನ್ನು ದೊಡ್ಡ ಗುರಾಣಿಯಂತೆ ಆವರಿಸಿಕೊಳ್ಳುವುದು**’’ (ಕೀರ್ತನೆಗಳು 5:11).

ಒಂದು ಸಂದರ್ಶನಕ್ಕಾಗಿ (ಇಂಟರ್‌ವ್ಯೂಗೆ) ಹೋಗುವುದಕ್ಕೆ, ದೇವರ ದಯೆಗಾಗಿ ಪ್ರಾರ್ಥಿಸುತ್ತಿದ್ದೀರಾ ಎಂದು ಊಹಿಸಿಕೊಳ್ಳಿ. ನೀತಿವಂತನನ್ನು ದೇವರು ಆಶೀರ್ವದಿಸುವವನು ಎಂದು ಸತ್ಯವೇದ ಹೇಳುತ್ತದೆ. ನೀವು ನಿಮ್ಮ ರೆಸ್ಯೂಮ್ (ವ್ಯಕ್ತಿಯ ಕೆಲಸದ ವಿವರ)ದಲ್ಲಿ ಸುಳ್ಳಾದ ವಿವರಗಳನ್ನು ಬರೆದಿದ್ದರೆ, ನಿಮ್ಮಂತವರು ದೇವರ ದಯೆಯನ್ನುಮರೆತು ಬಿಡಬೇಕು. ಏಕೆಂದರೆ ‘‘ನೀತಿವಂತನನ್ನು ನಾನು ಆಶೀರ್ವದಿಸುವೆನು. ನನ್ನ ದಯವು ಅವನನ್ನು ಆವರಿಸಿಕೊಳ್ಳುವುದೇ ಹೊರತು ಆ ನೀತಿವಂತನನ್ನು ಮತ್ತು ಅಪ್ರಾಮಾಣಿಕನನ್ನು ಅಲ್ಲ’’, ‘‘ನೀತಿವಂತನನ್ನು ಮಾತ್ರ’’ ಎಂದು ದೇವರು ಹೇಳುತ್ತಾರೆ. ಆದ್ದರಿಂದ ನಾವು ಏನು ಮಾಡಬೇಕು? ರೆಸ್ಯೂಮ್‌ನಲ್ಲಿ ‘‘6 ವರ್ಷದ’’ ಅನುಭವ ಇದೆ ಎಂದು ಸುಳ್ಳಾಗಿ ಬರೆಯುವ ಬದಲು ‘‘6 ತಿಂಗಳ’’ ಅನುಭವ ಇದೆ ಎಂದು ಸತ್ಯವನ್ನು ಸತ್ಯವಾಗಿ ಬರೆದು, ನಂತರ ಧೈರ್ಯವಾಗಿ ದೇವರ ಬಳಿಗೆ ಬಂದು 6 ವರ್ಷಗಳ ಅನುಭವವಿರುವ ವ್ಯಕ್ತಿಗೆ ಸಿಗತಕ್ಕ ಕೆಲಸವನ್ನು ನನಗೆ ದೊರಕಿಸಿ ಕೊಡುವುದಕ್ಕೆ ನಿನ್ನನ್ನೇ ಆತುಕೊಂಡಿದ್ದೇನೆಂದು ಹೇಳಬಹುದು. ರೆಸ್ಯೂಮ್‌ನಲ್ಲಿ ಸುಳ್ಳಾದ ಮಾಹಿತಿಯನ್ನು ಬರೆಯುವುದರ ಬದಲು ಹೀಗೆ ಮಾಡುವುದು ಸರಿಯಾದದ್ದಾಗಿದೆ. ನಮ್ಮಲ್ಲಿ ಪ್ರಾಮಾಣಿಕತೆ ಇರುವಾಗ ಮಾತ್ರ ದೇವರು ನಮಗೆ ಆತನ ದಯೆಯನ್ನು ತೋರಿಸುತ್ತಾನೆ.

## ಸಂರಕ್ಷಣೆ ಮತ್ತು ಉತ್ತರಿಸಲ್ಪಟ್ಟ ಪ್ರಾರ್ಥನೆ

‘‘ನಿನ್ನನ್ನೇ ನಿರೀಕ್ಷಿಸಿಕೊಂಡಿದ್ದೇನೆ; ನಿರ್ದೋಷ ಭಕ್ತಿಯೂ ಯಥಾರ್ಥತ್ವವೂ ನನ್ನನ್ನು ಕಾಯಲಿ’’ ಎಂದು ಕೀರ್ತನೆಗಾರನು ಹೇಳುತ್ತಾನೆ (ಕೀರ್ತನೆಗಳು 25:21). ನಾವು

ಪ್ರಾಮಾಣಿಕತೆಯಲ್ಲಿಯೂ ಮತ್ತು ಸತ್ಯದಲ್ಲಿಯೂ ನಡೆದಿದ್ದೇವೆ ಮತ್ತು ನಾವು ಕಾಪಾಡಲ್ಪಡುತ್ತೇವೆ ಮತ್ತು ಸಂರಕ್ಷಿಸಲ್ಪಡುತ್ತೇವೆಂದು ನಮಗೆ ಗೊತ್ತು ಎಂದು ದೇವರಿಗೆ ಹೇಳುವುದಕ್ಕೆ ಶಕ್ತರಾಗುವುದು ಎಂತಹ ಭದ್ರವಾದ ಸ್ಥಾನವಾಗಿದೆ!

**''ಯೆಹೋವನು ನೀತಿವಂತರನ್ನು ಕಟಾಕ್ಷಿಸುತ್ತಾನೆ; ಅವರು ಮೊರೆಯಿಡುವಾಗ ಕಿವಿಗೊಡುತ್ತಾನೆ''** (ಕೀರ್ತನೆಗಳು 34:15).

**ಯೆಹೋವನು ನೀತಿವಂತರ ಕೂಗನ್ನು ಕೇಳಿ ಎಲ್ಲಾ ಕಷ್ಟಗಳಿಂದ ಅವರನ್ನು ಬಿಡಿಸುತ್ತಾನೆ** (ಕೀರ್ತನೆಗಳು 34:17).

**ನೀತಿವಂತನಿಗೆ ಸಂಭವಿಸುವ ಕಷ್ಟಗಳು ಅನೇಕವಿದ್ದರೂ, ಯೆಹೋವನು ಅವೆಲ್ಲವುಗಳಿಂದ ಅವನನ್ನು ಬಿಡಿಸುತ್ತಾನೆ** (ಕೀರ್ತನೆಗಳು 34:19).

ಉತ್ತರಿಸಲ್ಪಟ್ಟ ಪ್ರಾರ್ಥನೆ ಮತ್ತು ಸಂರಕ್ಷಣೆ ನೀತಿವಂತರಿಗಾಗಿದೆ. ನಾವು ಪ್ರಾವಮಾಣಿಕತೆಯಲ್ಲಿ ನಡೆಯುವುದಕ್ಕೆ ನಿಂತಾಗ ಅನೇಕ ಕಷ್ಟಗಳನ್ನು ಎದುರಿಸಬೇಕಾಗಬಹುದು, ಆದರೆ ದೇವರು ಪ್ರತಿಯೊಂದರಿಂದಲೂ ನಮ್ಮನ್ನು ಬಿಡಿಸುತ್ತಾರೆ.

## ಶಾಶ್ವತವಾದ ಸಂರಕ್ಷಣೆ

**ಸತ್ಯದ ತುಟಿ ಶಾಶ್ವತ; ಸುಳ್ಳಿನ ನಾಲಿಗೆ ಕ್ಷಣಿಕ** (ಜ್ಞಾನೋಕ್ತಿಗಳು 12:19).

ಸತ್ಯ ಶಾಶ್ವತ! ಸುಳ್ಳು ಇಂದು ಅವರ ಉದ್ದೇಶವನ್ನು ನೆರವೇರಿಸಬಹುದು, ಆದರೆ ಅವು ನಾಳೆ ಹೊರಟು ಹೋಗಿರುತ್ತವೆ. ನಾವು ಅವುಗಳ ಮೇಲೆ ಆತುಕೊಳ್ಳಲಾಗುವುದಿಲ್ಲ. ಮೊದಲನೆಯ ಸುಳ್ಳನ್ನು ಸಂರಕ್ಷಣೆ ಮಾಡುವುದಕ್ಕೆ ನಾವು ಬಹುಶಃ ಇನ್ನೂ ಅನೇಕ ಸುಳ್ಳುಗಳನ್ನು ಸೃಷ್ಟಿಸಬೇಕಾಗುತ್ತದೆ. ಸುಳ್ಳಿನಲ್ಲಿ ರಕ್ಷಣೆ ಇಲ್ಲ. ಹೇಗಾದರೂ ಸರಿ. ನಾವು ಸತ್ಯವನ್ನಾಡಿದಾಗ, ನಾವು ಸುರಕ್ಷಿತವಾಗಿದ್ದೇವೆಂದು ಅನಿಸುತ್ತದೆ ಮತ್ತು ನಾವು ಸುರಕ್ಷಿತವಾಗಿರುತ್ತೇವೆ. ನಮ್ಮನ್ನು ನಾವೇ ಕಾಪಾಡಿಕೊಳ್ಳುವ ಅಗತ್ಯವಿರುವುದಿಲ್ಲ. ಏಕೆಂದರೆ ಸತ್ಯವು ತಾನೇ ಸತ್ಯವನ್ನು ಕಾಪಾಡುತ್ತದೆ!

## ಸ್ಪಷ್ಟತೆ/ಬೆಳಕು

**ನೀತಿವಂತರಿಗೋಸ್ಕರ ಪ್ರಕಾಶವೂ, ಯಥಾರ್ಥ ಹೃದಯವುಳ್ಳವರಿಗೆ ಸಂತೋಷವೂ ಬಿತ್ತಲ್ಪಟ್ಟಿವೆ** (ಕೀರ್ತನೆಗಳು 97:11).

ನಾವು ನೀತಿಯಲ್ಲಿ ನಡೆಯುವಾಗ, ದೇವರ ಬೆಳಕು ನಮ್ಮ ಮಾರ್ಗದಲ್ಲಿ ಬೀಳುವುದನ್ನು ನಾವು ನಿರೀಕ್ಷಿಸಬಹುದು. ನಾವು ನೀತಿಯಲ್ಲಿ ನಡೆಯದೆ ಇರುವಾಗ, ಮಾರ್ಗವು ಕರಾಳವಾಗಿಯೂ ಮತ್ತು ಕತ್ತಲಾಗಿಯೂ ಇದೆಯೆಂದು ದೂರುವುದಕ್ಕೆ ನಮಗೆ ಸಾಧ್ಯವಿಲ್ಲ. ಪ್ರತಿ ಸಾರಿ ನಾವು ಸುಳ್ಳು ಹೇಳುವಾಗ ನಾವು ನಮ್ಮ ಜೀವಿತದಲ್ಲಿರುವ ದೇವರ ಬೆಳಕನ್ನು ''ಆರಿಸುತ್ತಿರುತ್ತೇವೆ'' ಮತ್ತು ನಾವು ನೀತಿಯಲ್ಲಿ ನಡೆಯುವಾಗ ದಾರಿ ಸ್ಪಷ್ಟವಾಗಿ ಕಾಣಬೇಕೆಂದು ನಾವು ಬೆಳಕನ್ನು ಹತ್ತಿಸುತ್ತಿರುತ್ತೇವೆ'' ಎಂದು ಅದನ್ನು ಈ ರೀತಿ ಯೋಚಿಸಿರಿ!

## ಪೂರ್ವಾರ್ಜಿತ ಆಸ್ತಿ

**ಸದ್ಧರ್ಮಿಯು ನಿರ್ದೋಷವಾಗಿ ನಡೆಯುವನು; ಅವನು ಗತಿಸಿದ ಮೇಲೆಯೂ ಅವನ ಮಕ್ಕಳು ಭಾಗ್ಯವಂತರು** (ಜ್ಞಾನೋಕ್ತಿಗಳು 20:7).

ನಿರ್ದೋಷವಾಗಿ ನಡೆಯುವಾಗ, ನಮ್ಮ ಮಕ್ಕಳಿಗೆ ನಾವು ಆಶೀರ್ವಾದವನ್ನು ಕೊಡಿಡುತ್ತಾ ಇರುತ್ತೇವೆ. ನಾವು ಪ್ರಾಮಾಣಿಕತೆಯಲ್ಲಿ ನಡೆಯದೆ ಇರುವಾಗ ವಿಪರ್ಯಾಸವಾಗಿ ನಾವು ನಮ್ಮ ಮಕ್ಕಳಿಗೆ ಶಾಪವನ್ನು ಕೊಡಿಡುತ್ತಾ ಇರುತ್ತೇವೆ. ನಾವು ಪ್ರಾಮಾಣಿಕತೆಯಲ್ಲಿ ನಡೆಯುವುದರ ಅಥವಾ ನಡೆಯದೆ ಇರುವುದರ ಮೇಲೆ ನಾವು ನಮ್ಮ ಮಕ್ಕಳಿಗೆ ಕೊಡಿಡುವ ಪೂರ್ವಾರ್ಜಿತ ಆಸ್ತಿ ನಿರ್ಧರಿಸಲ್ಪಡುವುದು.

### ಪ್ರಾಮಾಣಿಕತೆಯ ಆಶೀರ್ವಾದಗಳು

- **ನೀತಿವಂತನನ್ನು ದೇವರು ಆಶೀರ್ವದಿಸುತ್ತಾನೆ ಎಂದು ಸತ್ಯವೇದ ಹೇಳುತ್ತದೆ.**
- **ಉತ್ತರಿಸಲ್ಪಟ್ಟ ಪ್ರಾರ್ಥನೆ ಮತ್ತು ರಕ್ಷಣೆ ನೀತಿವಂತರಿಗಾಗಿದೆ.**
- **ನಾವು ಸತ್ಯವನ್ನಾಡಿದಾಗ ಸುರಕ್ಷಿತವಾಗಿದ್ದೇವೆಂದು ಅನಿಸುತ್ತದೆ ಮತ್ತು ನಾವು ಸುರಕ್ಷಿತವಾಗಿರುತ್ತೇವೆ.**
- **ನಾವು ನೀತಿಯಲ್ಲಿ ನಡೆಯುವಾಗ, ದೇವರ ಬೆಳಕು ನಮ್ಮ ಮಾರ್ಗದಲ್ಲಿ ಬೀಳುವುದನ್ನು ನಾವು ನಿರೀಕ್ಷಿಸಬಹುದು.**
- **ನಾವು ನಿರ್ದೋಷವಾಗಿ ನಡೆಯುವಾಗ, ನಮ್ಮ ಮಕ್ಕಳಿಗೆ ನಾವು ಆಶೀರ್ವಾದವನ್ನು ಕೊಡಿಡುತ್ತಾ ಇರುತ್ತೇವೆ.**

# 6

# ಪ್ರತ್ಯುತ್ತರ - ಬಿಡುಗಡೆ, ಪಶ್ಚಾತ್ತಾಪ, ಪರಿತ್ಯಾಗ ಮತ್ತು ಪ್ರತಿಷ್ಠೆ

## ಸುಳ್ಳಿನ ಆತ್ಮನ ಬಂಧನಗಳನ್ನು ಒಡೆಯುವುದು

ಕೇವಲ ಸತ್ಯವನ್ನು ಅರಿತಿರುವ ಸ್ಥಳದಿಂದ ನಾವು ಹೊರಬಂದು ಅದನ್ನು ನಮ್ಮ ಜೀವಿತದಲ್ಲಿ ಅಳವಡಿಸಿಕೊಳ್ಳುವ ಸ್ಥಾನಕ್ಕೆ ಬರಬೇಕು. ಸುಳ್ಳು ಹೇಳುವುದು ಎರಡನೆಯ ಸ್ವಭಾವದ ರೀತಿಯಲ್ಲಿಯೂ ಮತ್ತು ನೀವು ಅದನ್ನು ಏಕೆ ಮಾಡುತ್ತಿದ್ದೀರೆಂದು ನಿಮಗೆ ಗೊತ್ತಿಲ್ಲದೆ ಇರುವಂತಹ ಸ್ಥಿತಿಯಲ್ಲಿ ನಿಮ್ಮಲ್ಲಿ ಕೆಲವರು ಇರಬಹುದು. ಸತ್ಯವೇದವು ಎರಡು ಕಡೆಗಳಲ್ಲಿ ಸುಳ್ಳಿನ ಆತ್ಮಗಳ ಬಗ್ಗೆ ತಿಳಿಸಿದೆ (1 ಅರಸುಗಳು 22:22, 23, 2 ಪೂರ್ವ ಕಾಲ ವೃತ್ತಾಂತ 18:21, 22) ಸುಳ್ಳನ್ನು ಹೇಳುವುದಕ್ಕೆ ಪ್ರೋತ್ಸಾಹಿಸುವ ಮತ್ತು ಜನರ ನಡತೆ ಮತ್ತು ಸ್ವಭಾವದ ಮೇಲೆ ಪ್ರಭಾವ ಬೀರುವ ದುರಾತ್ಮಗಳು ಇವೆ ಎಂದು ಇದರ ಅರ್ಥ. ನೀನು ಮರು ಹುಟ್ಟಿರಬಹುದು, ಆತ್ಮನಿಂದ ತುಂಬಿರಬಹುದು ಮತ್ತು ಅನ್ಯ ಭಾಷೆಯಲ್ಲಿ ಮಾತನಾಡುತ್ತಿರಬಹುದು. ಆದರೂ ನೀನು ಸುಳ್ಳು ಹೇಳುವ ಆತ್ಮನ ಹತೋಟಿಯ ಕೆಳಗೆ ಇರಬಹುದು. ದೇವರನ್ನು ಹುಡುಕು ಮತ್ತು ಬಂಧನಗಳಿಂದ ಸ್ವತಂತ್ರನಾಗು!

## ಸುಳ್ಳಿನ ಕಡೆಯಿಂದ ನಿಮ್ಮ ಮನೋವೃತ್ತಿಯನ್ನು ಬದಲಾಯಿಸಿ

**ಶಿಷ್ಟನು ಮೋಸಕ್ಕೆ ಅಸಹ್ಯಪಟ್ಟು ಮಾಡಲೊಲ್ಲನು; ದುಷ್ಟನ ನಡತೆಯು ಹೇಸಿಗೆಗೂ, ನಾಚಿಕೆಗೂ ಆಸ್ಪದ** (ಜ್ಞಾನೋಕ್ತಿಗಳು 13:5).

**ಮಿಥ್ಯವಾದದ್ದನ್ನು ಹಗೆ ಮಾಡುತ್ತೇನೆ, ಅದು ನನಗೆ ಅಸಹ್ಯವಾಗಿದೆ; ನಿನ್ನ ಧರ್ಮ ಶಾಸ್ತ್ರವು ನನಗೆ ಪ್ರಿಯವಾಗಿದೆ.** (ಕೀರ್ತನೆಗಳು 119:163).

ದೇವರ ಮುಂದೆ ಅಪ್ರಾಮಾಣಿಕತನವು ಸ್ವೀಕರಿಸಲ್ಪಡುವುದಿಲ್ಲ ಎಂದು ನಮ್ಮಲ್ಲಿ ಅನೇಕರಿಗೆ ಗೊತ್ತಿದ್ದರೂ, ನಮ್ಮಲ್ಲಿ ನಾವೇ ಮತ್ತು ಬೇರೆಯವರಲ್ಲಿಯೂ ನಾವು ಅಪ್ರಾಮಾಣಿಕತನವನ್ನು ಸಹಿಸಿಕೊಳ್ಳುತ್ತೇವೆ. ಅಸತ್ಯವನ್ನು ಸಹಿಸಿಕೊಳ್ಳಲು

ಅಸಾಧ್ಯವಾದ ಪರಿಶುದ್ಧ ಸ್ಥಾನಕ್ಕೆ ನಾವು ಬರಬೇಕು. ಜನಗಳ ಸಂಬಂಧದಲ್ಲಿ ನಾವು ಅಸಹಿಷ್ಣತೆ ಉಳ್ಳವರಾಗಿಲ್ಲ. ಆದರೆ ಸುಳ್ಳು ಮತ್ತು ಅಪ್ರಾಮಾಣಿಕತನದ ಅಭ್ಯಾಸದ ವಿಷಯದಲ್ಲಿ ನಾವು ಅಸಹಿಷ್ಣುತೆ ಉಳ್ಳವರಾಗಿದ್ದೇವೆ. ಸುಳ್ಳು ಹೇಳುವುದನ್ನು ನಾವು ದ್ವೇಷಿಸಬೇಕು. ಜ್ಞಾನೋಕ್ತಿಗಳು 13:5ರಲ್ಲಿ ''ಶಿಷ್ಟನು ಮೋಸಕ್ಕೆ ಅಸಹ್ಯಪಟ್ಟು ಮಾಡಲೊಲ್ಲನು'' ಎಂದು ಸತ್ಯವೇದ ಹೇಳುತ್ತದೆ. ಸುಳ್ಳಿನ ವಿಷಯದಲ್ಲಿ ನಾವು ನಮ್ಮ ಸ್ವಭಾವವನ್ನು ಬದಲಿಸಿಕೊಳ್ಳಬೇಕಾಗಿದೆ. ಸುಳ್ಳನ್ನು ನಮ್ಮ ಜೀವಿತದಿಂದ ತೆಗೆದು ಹಾಕಲು ನಾವು ದೇವರ ಕೃಪೆಯನ್ನು ಹುಡುಕೋಣ. ನಮಗೆ ನೋವಾಗುವುದಾದರೂ ಸತ್ಯವನ್ನು ಮಾತನಾಡುವುದಕ್ಕೆ ನಾವು ನಿರ್ಧರಿಸೋಣ.

## ಸುಳ್ಳಿನೊಂದಿಗೆ ಪಾಲುಗಾರರಾಗುವುದನ್ನು ನಿರಾಕರಿಸುವುದು

**''ಮೋಸಗಾರನು ನನ್ನ ಮನೆಯಲ್ಲಿ ಇರಲೇಬಾರದು; ಸುಳ್ಳುಗಾರನು ನನ್ನ ಮುಂದೆ ನಿಲ್ಲಕೂಡದು''** (ಕೀರ್ತನೆಗಳು 101:7).

ಬೇರೆಯವರ ಸುಳ್ಳಿನಲ್ಲಿ ಪಾಲುಗೊಳ್ಳಬೇಡಿ. ವಿವಿಧ ರೀತಿಯ ಪಾಲುಗಾರಿಕೆಯಲ್ಲಿ ನಾವು ಜನರೊಂದಿಗೆ ಕೆಲಸ ಮಾಡುವಾಗ, ಕೆಲಸ ಮಾಡುವ ಸ್ಥಳದಲ್ಲಾಗಲಿ ಅಥವಾ ಬೇರೆ ಕಡೆಯಲ್ಲಾಗಲಿ, ಇದು ಇಷ್ಟೊಂದು ಸತ್ಯವಾಗಿದೆ. ಕೆಲವು ಸಲ ಬೇರೆಯವರು ಸುಳ್ಳು ಹೇಳುವುದನ್ನು ನಾವು ನೋಡುವಾಗ, ಸತ್ಯವನ್ನು ಮಾತನಾಡುವುದಕ್ಕೆ ಬದಲು ಅಥವಾ ಸುಳ್ಳಿನೊಂದಿಗೆ ಹೋಗುವುದಕ್ಕೆ ನಿರಾಕರಿಸುವ ಬದಲು ನಾವೂ ಸಹ ಅದರಲ್ಲಿ ಭಾಗೀದಾರರಾಗುತ್ತೇವೆ. ಅದು ಆ ಮನುಷ್ಯನ ಸುಳ್ಳು, ನಾವು ಅದನ್ನು ಮಾತನಾಡದೆ ಇದ್ದುದರಿಂದ ನಾವು ಶುದ್ಧರು ಎಂದು ನಾವು ಕಲ್ಪಿಸಿಕೊಳ್ಳುತ್ತೇವೆ. ಸಹಾಪರಾಧಿಯಾಗಿರುವ ನಾವೂ ಸಹ ಆ ಸುಳ್ಳಿನಲ್ಲಿ ಪಾಲುಗಾರರಾಗುತ್ತಿದ್ದೇವೆ ಎಂಬ ನಿಜ ಸಂಗತಿ ಉಳಿದುಕೊಳ್ಳುತ್ತದೆ. ನಮ್ಮ ಸಭೆಯನ್ನು ಪ್ರಾರಂಭಿಸಿದ ಮೊದ ಮೊದಲಿನ ವರ್ಷದಲ್ಲಿ ಒಬ್ಬ ಯೌವನಸ್ಥನು ತಪ್ಪದೆ ಒಂದು ವರ್ಷ ನಮ್ಮ ಎಲ್ಲಾ ಆರಾಧನಾ ಕೂಟ, ಪ್ರಾರ್ಥನಾ ಕೂಟ ಮತ್ತು ಕಾರ್ಯಕ್ರಮಗಳಲ್ಲಿ ಹಾಜರಿರುತ್ತಿದ್ದನು. ನಾನು ಅವನಿಗೆ ಏನೂ ಹೇಳದಿದ್ದರೂ, ನಿಜವಾಗಿ ನಾನು ಪ್ರಭಾವಿತನಾದೆ. ಒಂದು ಭಾನುವಾರ ಬೆಳಗ್ಗೆ ನಾನು ''ವಚನ ಬದ್ಧತೆಯ ಶಕ್ತಿ'' ಎಂಬ ವಿಷಯವಾಗಿ ಮಾತನಾಡಬೇಕಿತ್ತು ಮತ್ತು ಬೇರೆ ವಿಷಯಗಳ ಮಧ್ಯದಲ್ಲಿ ಪ್ರಾಮಾಣಿಕತನಕ್ಕೆ ವಚನಬದ್ಧರಾಗಿರುವುದರ ಬಗ್ಗೆ ಮಾತನಾಡಿದ್ದೆ. ಸಭೆಯ ಆರಾಧನೆ ಸೇವೆಯ ಅಂತ್ಯದಲ್ಲಿ, ಈ ಯೌವನಸ್ಥನು ನನ್ನ ಬಳಿ ಬಂದು ತಾನು ವಿದೇಶದಲ್ಲಿರುವ ಸತ್ಯವೇದ ಕಾಲೇಜಿಗೆ ಅರ್ಜಿ ಹಾಕಿರುವುದಾಗಿ ನನಗೆ ತಿಳಿಸಿದನು. ಮತ್ತು ವಿಸಾ ಮತ್ತು ಬೇರೆ ಅಗತ್ಯತೆಗಳಿಗಾಗಿ

ಆಲ್ ಪೀಪಲ್ಸ್ ಸಭೆಯಲ್ಲಿ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದಾನೆ ಎಂದು ಪತ್ರದಲ್ಲಿ ಬರೆದು ಕೊಡುವಂತೆ ಹೇಳಿದನು. ಸಭೆಯು ಆತನನ್ನು ಸತ್ಯವೇದದ ಕಾಲೇಜಿನಲ್ಲಿ ಓದುವುದಕ್ಕೆ ಕಳಿಸಿಕೊಡುತ್ತಿದೆ ಎಂದೂ ಮತ್ತು ಆ ಓದನ್ನು ಮುಗಿಸಿದ ನಂತರ, ಆತನು ಹಿಂತಿರುಗಿ ಬಂದು ಸಭೆಗೋಸ್ಕರ ಕೆಲಸ ಮಾಡುತ್ತಾನೆ ಎಂಬುದಾಗಿ ಬರೆದುಕೊಡಬೇಕೆಂದು ಕೇಳಿದನು. ಹೇಗಾದರೂ ಸರಿ, ಆ ಯೌವನಸ್ಥನಿಗೆ ಪತ್ರದಲ್ಲಿ ಬರೆಯಲ್ಪಡಬೇಕಾದ ಯಾವ ವಿಷಯಗಳೂ ಸತ್ಯವಾಗಿರಲಿಲ್ಲ. ನಾನು ಗಾಬರಿಗೊಂಡೆ! ಇನ್ನೊಂದು ದಿನ ಬಂದು ನನ್ನನ್ನು ಭೇಟಿ ಮಾಡುವಂತೆ ಆತನಿಗೆ ಹೇಳಿದೆನು. ನಾವು ಭೇಟಿಯಾದಾಗ, ಅವನು ಈ ರೀತಿಯ ಬೇಡಿಕೆಯನ್ನು ಮಾಡುವುದು ತಪ್ಪೆಂದು ನಾನು ಅವನಿಗೆ ತೋರಿಸಿಕೊಟ್ಟೆನು. ಆ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ತಪ್ಪದೆ ಸಭೆಗೆ ಹಾಜರಾಗಿದ್ದನು ಎಂದು ಬರೆದಿರುವ ಪತ್ರವನ್ನು ಮಾತ್ರ ನಾನು ನಿನಗೆ ಕೊಡುತ್ತೇನೆ ಎಂದು ನಾನು ಅವನಿಗೆ ಹೇಳಿದೆನು ಮತ್ತು ಆ ಪತ್ರವನ್ನು ಅವನ ಕೈಯಲ್ಲಿ ಕೊಟ್ಟೆನು.

ನಿರ್ದಿಷ್ಟವಾಗಿ ಇದನ್ನೆ ನಾನು ತಿಳಿಯಪಡಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ. ನಾವು ಕ್ರಮಬದ್ಧವಾಗಿ ಸಭೆಗೆ ಹಾಜರಾಗಿ, ಅನೇಕ ಸಂದೇಶಗಳನ್ನು ಕೇಳಿಯೂ, ಇನ್ನೂ ಸುಳ್ಳಾಡುತ್ತಾ, ಅಸತ್ಯ ಅಭ್ಯಾಸಗಳನ್ನು ಅವಲಂಬಿಸಿಕೊಳ್ಳಬಹುದು. ನಾವು ಇಂತಹ ಜನರನ್ನು ಸಂಧಿಸಿದಾಗ, ಇವರು ಯಾವ ಸಭೆಗೆ ಹೋಗುತ್ತಿದ್ದಾರೆ ಮತ್ತು ಪ್ರಾಮಾಣಿಕತೆಯ ಅವಶ್ಯಕತೆ ಇವರಿಗೆ ಬೋಧಿಸಲ್ಪಟ್ಟಿಲ್ಲವಾ ಎಂದು ಆಶ್ಚರ್ಯವಾಗುತ್ತದೆ. ಅನೇಕ ಕ್ರಿಸ್ತೀಯ ಸಹೋದರ ಮತ್ತು ಸಹೋದರಿಯರು ಅಸತ್ಯ ಮತ್ತು ಅನೀತಿಯಲ್ಲಿ ನಡೆಯುತ್ತಿರುವ ಅನೇಕ ಘಟನೆಗಳು ನನ್ನ ನೆನಪಿಗೆ ಬರುತ್ತದೆ.

ಆದರೆ ಈಗ ಅದೆಲ್ಲವೂ ಬದಲಾಗಬೇಕು. ಅಪ್ರಾಮಾಣಿಕತೆಯನ್ನು ಸಹಿಸಿಕೊಳ್ಳುವ ಸ್ಥಳದಿಂದ ನಾವು ಹೊರಬಂದು, ಎಲ್ಲಾ ರೀತಿಯ ಅಪ್ರಾಮಾಣಿಕತೆಯನ್ನು ದ್ವೇಷಿಸುವ ಮತ್ತು ತುಂಬಾ ಅಸಹ್ಯ ಪಡುವ ಸ್ಥಿತಿಗೆ ಬರಬೇಕಾಗಿದೆ.

M M

- **ಸುಳ್ಳಿನ ದುರಾತ್ಮನ ಬಂಧನಗಳನ್ನು ಒಡೆಯುವುದು.**
- **ಸುಳ್ಳಿನ ವಿಷಯದಲ್ಲಿ ನಿಮ್ಮ ಸ್ವಭಾವವನ್ನು ಬದಲಾಯಿಸಬೇಕು.**
- **ಅಪ್ರಾಮಾಣಿಕತೆಯ ಜೊತೆ ಪಾಲುಗಾರರಾಗುವುದಕ್ಕೆ ನಿರಾಕರಿಸುವುದು.**

W W

# ಸಮರ್ಪಣೆಯ ಪ್ರಾರ್ಥನೆ

ಸಮರ್ಪಣೆಯ ಪ್ರಾರ್ಥನೆಯನ್ನು ನಾವು ಮಾಡೋಣ. ಕೀರ್ತನೆಗಾರನು ಈ ರೀತಿಯಲ್ಲಿ ಪ್ರಾರ್ಥಿಸಿದನು - ''ಯೆಹೋವನೇ. ನನ್ನ ಬಾಯಿಗೆ ಕಾವಲಿರಿಸು; ನನ್ನ ತುಟಿಗಳೆಂಬ ಕದವನ್ನು ಕಾಯಿ.'' (ಕೀರ್ತನೆಗಳು 141:3) ಮತ್ತು ''ಮಿಥ್ಯ ಮಾರ್ಗವನ್ನು ನನಗೆ ದೂರ ಮಾಡು; ನಿನ್ನ ಧರ್ಮ ಶಾಸ್ತ್ರವನ್ನು ನನಗೆ ಅನುಗ್ರಹಿಸು'' (ಕೀರ್ತನೆಗಳು 119:29).

ಪ್ರಾಮಾಣಿಕತೆ, ಸತ್ಯತೆ ಮತ್ತು ನೀತಿ ಎಂಬ ಸ್ಥಾನಕ್ಕೆ ದೇವರ ಮುಂದೆ ಬರೋಣ. ನಾವು ರಕ್ಷಣೆ ಹೊಂದಿದ್ದೇವೆಂದು ನಿಮಗೆ ಗೊತ್ತು. ದೇವರು ಕರುಣೆ, ದಯೆ ಮತ್ತು ಪ್ರೀತಿಯುಳ್ಳವನೆಂದು ನಮಗೆ ಗೊತ್ತು. ಹೇಗಾದರೂ ಸರಿ ಅದನ್ನು ನಾವು ಉದಾಸೀನ ಮಾಡಬಾರದು. ದೇವರ ಕೃಪೆಯನ್ನು ನಾವು ದುರುಪಯೋಗ ಮಾಡದೆ ಇರೋಣ. ನಾವೆಲ್ಲರೂ ಒಂದಲ್ಲ ಒಂದು ಅಂತಸ್ತಿನಲ್ಲಿ ಅಪ್ರಾಮಾಣಿಕರಾಗಿರುವುದರಿಂದ ಈ ವಿಷಯದಲ್ಲಿ ನಮ್ಮೆಲ್ಲರಿಗೂ ದೇವರ ಮುಟ್ಟುವಿಕೆ ಅಗತ್ಯವಾಗಿದೆ.

## ಪ್ರಾರ್ಥನೆ

*ಸುಳ್ಳಿನ ಮಾರ್ಗವನ್ನು ನನ್ನಿಂದ ತೆಗೆದು ಹಾಕು. ಓ ಕರ್ತನೆ, ಅಸತ್ಯ ಮತ್ತು ಅಪ್ರಾಮಾಣಿಕತೆಯನ್ನು ನನ್ನಿಂದ ತೆಗೆದು ಹಾಕು. ಅಸತ್ಯವನ್ನು ಸಹಿಸಿಕೊಳ್ಳುವುದನ್ನು ನನ್ನಿಂದ ತೆಗೆದು ಹಾಕು ಮತ್ತು ಅಸತ್ಯವನ್ನು ನಾನು ದ್ವೇಷಿಸುವ ಹಾಗೆ ಮಾಡು. ನನ್ನ ಜೀವಿತದಲ್ಲಿ ಒಂದು ''ಶಸ್ತ್ರ ಚಿಕಿತ್ಸೆ''ಯನ್ನು ಮಾಡು ಕರ್ತನೆ! ದೀರ್ಘಕಾಲ ನಾನು ನನ್ನ ಜೀವಿತದಲ್ಲಿ ಅಸತ್ಯವನ್ನು ಸಹಿಸಿಕೊಂಡಿದ್ದೇನೆ, ಆದರೆ ಈಗ ನಾನು ನಿನ್ನ ಬಳಿ ಬಂದು, ಇದಕ್ಕೆಲ್ಲಾ ಒಂದು ಅಂತ್ಯವನ್ನು ಹಾಕುವುದಕ್ಕೆ ಕೇಳಿಕೊಳ್ಳುತ್ತೇನೆ. ಸುಳ್ಳಿನ ಬೇರಿಗೆ ಕೊಡಲಿಯನ್ನು ಹಾಕಿ, ಬೇರು ಸಮೇತ ಅದನ್ನು ಕಿತ್ತು ಹಾಕು. ನನ್ನಿಂದ ಸುಳ್ಳು, ಅಪ್ರಾಮಾಣಿಕತನ ಮತ್ತು ಅನೀತಿಯನ್ನು ತೆಗೆದು ಹಾಕು. ನಿನ್ನ ಮುಂದೆ ಪ್ರಾಮಾಣಿಕತೆಯಲ್ಲಿ ನಡೆಯುವಂತಾ ವ್ಯಕ್ತಿ ನಾನಾಗಬೇಕು ಮತ್ತು ಸತ್ಯ ಸ್ಥಾಪನೆಗೆ ನಿನ್ನ ದಯೆಗೆ ಮತ್ತು ಆಶೀರ್ವಾದಕ್ಕೆ ನಿನ್ನನ್ನೇ ನೋಡುತ್ತೇನೆ. ಸತ್ಯವಾಗಿ ವ್ಯವಹರಿಸುವ ವ್ಯಕ್ತಿ ನಾನಾಗಬೇಕು ಮತ್ತು ನಿನ್ನನ್ನು ಸಂತೋಷಪಡಿಸುವ ವ್ಯಕ್ತಿ ನಾನಾಗಿರಬೇಕು. ಸತ್ಯಕ್ಕೋಸ್ಕರ ನಾನು ಜನರನ್ನು ತಲೆಕೆಳಗಾಗುವಂತೆ ಮಾಡಿದರೂ ಪರವಾಗಿಲ್ಲ. ನಾನು*

*ನಿನ್ನನ್ನು ಸಂತೋಷಪಡಿಸಬೇಕು, ನಾನು ನಿನಗೆ ಸುಖಾನುಭವ ಕೊಡಬೇಕು. ನನ್ನ ದೇವರೇ, ನನ್ನ ಬಗ್ಗೆ ನೀನು ಸಂತೋಷಪಡಬೇಕು ಮತ್ತು ಉತ್ತೇಜಿತನಾಗಬೇಕು. ಕರ್ತನೆ, ಪವಿತ್ರಾತ್ಮನ ಕೆಲಸ ಮತ್ತು ಶಕ್ತಿ ಮಾತ್ರ ನನ್ನ ಆತ್ಮದ ಅಂತರೀಂದ್ರಕ್ಕೆ ಹೋಗಿ ಶುದ್ದೀಕರಿಸುವ ನನ್ನ ಜೀವಿತದಲ್ಲಿರುವ ಈ ದೋಷದ ಬೇರುಗಳನ್ನು ಕತ್ತರಿಸಲು ಸಾಧ್ಯ. ನನ್ನನ್ನು ನಾನೇ ನಿನ್ನ ಸಿಂಹಾಸನದ ಮುಂದೆ ಇಡುತ್ತೇನೆ; ನನ್ನಲ್ಲಿ ಕೆಲಸ ಮಾಡಲು ಈ ಸಮಯವನ್ನು ನೀನು ತೆಗೆದುಕೋ. ನಿನ್ನ ಪವಿತ್ರಾತ್ಮನ ಬಲದಿಂದ ಇದನ್ನು ಮಾಡು. ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುತ್ತೇನೆ. ಆಮೇನ್.*

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ಧೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church<br>
Account Number: 0057213809,<br>
IFSC Code: CITI0000004<br>
Bank: Citibank N.A., 506-507,<br>
Level 5, Prestige Meridian 2, # 30,<br>
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

### ಉಚಿತ ಇ-ಪುಸ್ತಕಗಳು

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

### ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟಿವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್** ಮಿನಿಸ್ಟ್ರಿ (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚಿಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

## ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಇಂದಿನ ಜಗತ್ತಿನಲ್ಲಿ ಪ್ರತಿ ಸ್ಥಳದಲ್ಲಿ ಭ್ರಷ್ಟಾಚಾರ, ಮೋಸ ಮತ್ತು ಲಂಚ ಸರ್ವೇಸಾಮಾನ್ಯವಾಗಿರುವುದನ್ನು ನೋಡುತ್ತೇವೆ. ಹೀಗೆ ಪ್ರಪಂಚದ ಜನರು ಕಾರ್ಯ ನಿರ್ವಹಿಸುತ್ತಿರುವಂತೆ ಕಾಣುತ್ತದೆ. ಯಾಕೆಂದರೆ ಅವರು ಅದೇ ರೀತಿಯಾಗಿ ಕಲಿಸಲ್ಪಟ್ಟಿದ್ದಾರೆ; ಅವರಿಗೆ ಉತ್ತಮವಾಗಿ ಏನೂ ತಿಳಿದಿಲ್ಲ. ಆದಾಗ್ಯೂ ದೇವರ ಮಕ್ಕಳುಗಳಾದ ನಮ್ಮ ಮಧ್ಯದಲ್ಲಿ ಪ್ರಾಮಾಣಿಕತೆಯ ಕೊರತೆ, ಅನೀತಿವಂತಿಕೆ, ವಂಚನೆಗಳನ್ನು ನೋಡುವಾಗ ನಿಜವಾಗಿಯೂ ಇದು ಬಹಳ ದುಃಖಕರ ಅನ್ನಿಸುತ್ತದೆ. ಯಾಕೆಂದರೆ, ಆ ರೀತಿಯಾಗಿ ಕಾರ್ಯ ನಿರ್ವಹಿಸುವುದಕ್ಕಿಂತ, ಉತ್ತಮವಾಗಿರುವಂತದ್ದು ನಮಗೆ ಗೊತ್ತಿದೆ.

ನಾವು, ಪ್ರಾಮಾಣಿಕತೆ, ಸತ್ಯಪರತೆ, ಪವಿತ್ರತೆ ಮತ್ತು ನೀತಿವಂತಿಕೆಯಲ್ಲಿ ಹೇಗೆ ನಡೆಯಬೇಕೆಂಬುದು ಗೊತ್ತಿರಬೇಕು. ಯಾಕೆಂದರೆ ಅವುಗಳ ಕುರಿತು ನಾವು ದೇವರ ವಾಕ್ಯದಲ್ಲಿ ಓದುತ್ತೇವೆ. ದೇವರ ವಾಕ್ಯದ ಸೇವಕರುಗಳು, ಬೋಧಕರುಗಳು, ಸಂದೇಶಕರು ಮತ್ತು ಸಭಾಪಾಲಕರುಗಳ ಮಧ್ಯದಲ್ಲಿ ಪ್ರಾಮಾಣಿಕತೆಯ ಕೊರತೆ, ಮೋಸ, ಅನೀತಿವಂತಿಕೆ ಇವುಗಳನ್ನು ನೋಡುವಂತದ್ದು ಸಹ ಇನ್ನಷ್ಟು ಕೆಟ್ಟದಾಗಿದೆ. ನಮ್ಮಲ್ಲಿ ಪ್ರತಿಯೊಬ್ಬರೂ ಪ್ರಾಮಾಣಿಕತೆ, ಸತ್ಯಪರತೆ ಮತ್ತು ಸತ್ಯ ಸಂಧತೆಯನ್ನು ನಾವು ಮಾಡುವಂತ ಎಲ್ಲ ಕಾರ್ಯಗಳಲ್ಲಿಯೂ ಸಂಪೂರ್ಣವಾಗಿ ಬದ್ಧತೆಯಿಂದ ಕೈಗೊಳ್ಳುವ ಸ್ಥಳಕ್ಕೆ ಬರಬೇಕು ಮತ್ತು ಈ ಪುಸ್ತಕವು ಅಂತಹ ಗುಣಗಳನ್ನು ನಮ್ಮೊಳಗೆ ಪ್ರೇರಿಸುವಂತೆ ಮಾಡುತ್ತದೆ.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org